ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 4, ಸಂಚಿಕೆ 5, ಮಾರ್ಚ್ 2026

SHRIDEVI ANTARANGA
Monthly Magazine




SHRIDEVI EDUCATION

ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್   ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್   ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್   ಇಂಗ್ಲಿಷ್ ಆವೃತ್ತಿ ಸಂಪಾದಕರು: ಕೃಷ್ಣ ವಿ.



ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

ಸೀಮಿತವಾದ ಸಂಪನ್ಮೂಲಗಳನ್ನು ತನ್ನದನ್ನಾಗಿಸಿಕೊಳ್ಳುವ ಬಯಕೆ ಯುದ್ಧದ ಮಾರ್ಗವನ್ನು ಅನುಸರಿಸುವಂತೆ ಮಾಡುತ್ತದೆ. ಆಡಳಿತಗಾರರ ಅಹಂಕಾರ, ಅಪನಂಬಿಕೆ, ಅತ್ಯಾಸೆ, ಹುಂಬತನ, ಮೊದಲಾದ ಪ್ರಬಲ ಮನೋವಿಕಾರಗಳೂ ಇದಕ್ಕೆ ನೀರೆರೆದು ದುರಂತವನ್ನು ತೀವ್ರಗೊಳಿಸುತ್ತವೆ.

# ಮಧ್ಯಪ್ರಾಚ್ಯದಲ್ಲಿನ ಯುದ್ಧ: ಹಲವು ವಿಷಯಗಳಲ್ಲಿ ಗೊಂದಲ

**ಯುದ್ಧ: ಕೊನೆಗಾಣದ ದುರಂತ:**

ಪ್ರಪಂಚದ ಇತಿಹಾಸದ ಮೊದಲನೆಯ ಪುಟದಿಂದ ಕ್ಷುಭಿತಗೊಂಡಿರುವ ಇಂದಿನ ದಿನದವರೆಗೆ, ಮಾನವನ ಜೀವನದಲ್ಲಿ ಯುದ್ಧವು ಅತ್ಯಂತ ವಿರೋಧಾಭಾಸಗಳ ಪ್ರತೀಕವಾಗಿದೆ. ಪ್ರಖರ ಬುದ್ಧಿಮತ್ತೆಯ ಚಿಂತಕರು, ಇತಿಹಾಸಕಾರರು ಮತ್ತು ರಾಜಕೀಯ ಮುತ್ಸದ್ದಿಗಳೆಲ್ಲರೂ ಉತ್ತರವನ್ನು ಹುಡುಕುತ್ತಿರುವ ಪ್ರಶ್ನೆ: 'ದುರಂತದಲ್ಲಿ ಕೊನೆಯಾಗುವ ಯುದ್ಧದಲ್ಲಿ ರಾಷ್ಟ್ರಗಳು ಏಕೆ ತೊಡಗಿಕೊಳ್ಳುತ್ತವೆ'.




ಯುದ್ಧದ ಕಾರಣಗಳು ಹಲವಾರು ಮತ್ತು ಸಂಕೀರ್ಣವಾದವು. ಸಾಮಾನ್ಯವಾಗಿ, ಭೂಮಿ, ನೀರು, ಖನಿಜಗಳು ಮತ್ತು ಶಕ್ತಿಮೂಲಗಳಂತಹ ಸೀಮಿತವಾದ ಸಂಪನ್ಮೂಲಗಳನ್ನು ತನ್ನದನ್ನಾಗಿಸಿಕೊಳ್ಳುವ ಬಯಕೆ ಯುದ್ಧದ ಮಾರ್ಗವನ್ನು ಅನುಸರಿಸುವಂತೆ ಮಾಡುತ್ತದೆ. ಇದರ ಜೊತೆಗೆ ಆಡಳಿತಗಾರರ ಅಹಂಕಾರ, ಅಪನಂಬಿಕೆ, ಅತ್ಯಾಸೆ, ಹುಂಬತನ, ಮೊದಲಾದ ಪ್ರಬಲ ಮನೋವಿಕಾರಗಳೂ ಇದಕ್ಕೆ ನೀರೆರೆದು ದುರಂತವನ್ನು ತೀವ್ರಗೊಳಿಸುತ್ತವೆ.

ಆದರೆ, ಸಾಮಾನ್ಯ ಜನತೆ ಯುದ್ಧವನ್ನು ಬಯಸುವುದಿಲ್ಲ ಎಂಬುದನ್ನು ನಾವು ಗಮನಿಸಬೇಕು. ಸದಾ ಚಟುವಟಿಕೆಗಳಲ್ಲಿ ಮುಳುಗಿರುವ ನಗರಗಳ ಜನರಾಗಲೀ, ಪ್ರಶಾಂತ ವಾತಾವಾರಣದ ಗ್ರಾಮೀಣ ಪ್ರದೇಶದ ಸಾಮಾನ್ಯರೇ ಆಗಿರಲಿ ಬಯಸುವುದು ರಕ್ಷಣೆ, ಶಾಂತ ಹಾಗೂ ಗೌರವಯುತವಾದ ಜೀವನವನ್ನು. ಯುದ್ಧದ ಬಗೆಗೆ ತೀರ್ಮಾನವನ್ನು ತೆಗೆದುಕೊಳ್ಳುವುದು ಆಯಾ ದೇಶದ ಆಡಳಿತವನ್ನು ತಮ್ಮ ಮುಷ್ಟಿಯಲ್ಲಿ ಇಟ್ಟುಕೊಂಡಿರುವ ಕೆಲವೇ ಮಂದಿ. ಕೆಲವು ವೇಳೆ ಯುದ್ಧವನ್ನು ಮಾಡಬೇಕೆಂಬ ಇಂತಹವರ ನಿರ್ಧಾರ ಸರಿಯಾಗಿಯೇ ಇರುತ್ತದೆಯಾದಾರೂ, ಬಹುತೇಕ ಸಂದರ್ಭಗಳಲ್ಲಿ ತಪ್ಪು ಸೈದ್ಧಾಂತಿಕ ನಿಲವುಗಳು, ತಪ್ಪು ತಿಳಿವಳಿಕೆಗಳು, ಅವಿಶ್ವಾಸ, ಶಕ್ತಿ ಪ್ರದರ್ಶನ ಅಥವಾ ಅತ್ಯಾಸೆಯಂತಹ ಹುಂಬ ಗುಣಗಳಿಂದಾಗಿ ವಿನಾಶದ ಹಾದಿಯಲ್ಲಿ ಅವರನ್ನು ಕೊಂಡೊಯ್ಯುತ್ತವೆ.




ವಿರೋಧಾಭಾಸವೆಂದರೆ ಶಾಂತಿಸ್ಥಾಪನೆಯ ಉದ್ದೇಶದ ಹೆಸರಿನಲ್ಲಿ ಯುದ್ಧಗಳು ಪ್ರಾರಂಭವಾಗುತ್ತವೆ. ತಮ್ಮ ದೇಶದ ಸಾರ್ವಭೌಮತ್ವವನ್ನು ಕಾಪಾಡಿಕೊಳ್ಳಬೇಕು, ಹೊರದೇಶಗಳ ಸಂಭವನೀಯ ಆಕ್ರಮಣವನ್ನು ತಪ್ಪಿಸಬೇಕು, ವಿಶ್ವದೆಲ್ಲೆಡೆ ಸ್ಥಿರತೆಯನ್ನು ತರಬೇಕು ಮೊದಲಾದ ಭ್ರಮಾತ್ಮಕ ಕಾರಣಗಳನ್ನು ಮುಂದುಮಾಡಿ ಆಡಳಿತಗಾರರು ಯುದ್ಧವನ್ನು ಕೈಗೆತ್ತಿಕೊಳ್ಳುತ್ತಾರೆ.

ಒಂದು ದೇಶವು ಇನ್ನೊಂದರ ಮೇಲೆ ಯುದ್ಧ ಮಾಡುವಾಗ, ಅದು ಕೇವಲ ಮಿಲಿಟರಿ ನಿಶಾನೆಯನ್ನಷ್ಟೇ ತನ್ನ ಗುರಿಯನ್ನಾಗಿಸಿ ಕೊಂಡಿರುವುದಿಲ್ಲ, ಬದಲಿಗೆ ನಗರಗಳು, ಶಾಲೆಗಳು, ಆಸ್ಪತ್ರೆಗಳು, ವಾಸಸ್ಥಾನಗಳು ಕೂಡ ಯುದ್ಧದ ಕ್ರೂರ ತಾಂಡವಕ್ಕೆ ಬಲಿಯಾಗುತ್ತವೆ. ಯುದ್ಧಕ್ಕೆ ಸಂಬಂಧಪಡದ ಮುಗ್ಧಜೀವಗಳನ್ನು ಕಳೆದುಕೊಳ್ಳುತ್ತೇವೆ. ▶▶ 2ನೇ ಪುಟಕ್ಕೆ...

# ಶ್ರೀದೇವಿ ಅಂಗಳದಲ್ಲಿ ಸಾಧನೆಯ ಸಂಭ್ರಮ – ಪ್ರೇರಣೆಯ ಹಬ್ಬ



ಖ್ಯಾತ ಲೆಪ್ರೊಸ್ಕೋಪಿಕ್ ತಜ್ಞ ಡಾ.ಸಿ.ಪಳನಿವೇಲು ಅವರಿಗೆ "ಡಾ.ಎಂ. ಆರ್. ಹುಲಿನಾಯ್ಕರ್ ಮತ್ತು ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಜೀವಮಾನ ಸಾಧನಾ ಪುರಸ್ಕಾರ".

▪ ವರದಿ: ಕೆ. ಎಸ್. ರಾಜಮನ್ನಾರ್

ಮಾರ್ಚ್ 13 ಶುಕ್ರವಾರ ಶ್ರೀದೇವಿ ವೈದ್ಯಕೀಯ ಕಾಲೇಜು ಅಂಗಳದಲ್ಲಿ ಸಡಗರ ಮನೆ ಮಾಡಿತ್ತು. ಅದೊಂದು ರೀತಿ ಸಾಧನೆ ಸಂಭ್ರಮಿಸುವ ಮನೆಯ ಹಬ್ಬವಾಗಿತ್ತು. ಇಬ್ಬರೂ ಮಹಾನ್ ಸಾಧಕ ವೈದ್ಯರನ್ನು ಕಣ್ತುಂಬಿಕೊಳ್ಳಲು, ಅವರ ಮಾತುಗಳನ್ನು ಕೇಳಲು ಸಭಾಂಗಣ ತುಂಬಿ ತುಳುಕುತ್ತಿತ್ತು.

ಹಿರಿಯ ಮತ್ತು ಕಿರಿಯ ವೈದ್ಯರ ಸಮಾಗಮವಾಗಿತ್ತು. ಪ್ರಶಸ್ತಿ ಕೊಡುವವರು ಮತ್ತು ಪ್ರಶಸ್ತಿ ಸ್ವೀಕರಿಸುವವರು ಇಬ್ಬರು ವೈದ್ಯಲೋಕದ ಮಹಾನ್ ಸಾಧಕರಾಗಿದ್ದು ಸಮಾರಂಭದ ವಿಶೇಷತೆಗೆ ಕಾರಣವಾಗಿತ್ತು. ಸಮಾಜಸೇವೆ, ಶಿಕ್ಷಣ, ಆರೋಗ್ಯ ವಲಯದಲ್ಲಿ ಮಹತ್ತರ ಸಾಧನೆ ಮಾಡಿದ ಇಬ್ಬರೂ ಒಂದೇ ವೇದಿಕೆಯಲ್ಲಿ ಅಸೀನರಾಗಿದ್ದರು.

ಕೊಯಮತ್ತೂರಿನ ಜಿ.ಎಂ. ಆಸ್ಪತ್ರೆಯ ಸಂಸ್ಥಾಪಕರೂ ಮತ್ತು ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸಾಲೋಕದ ಪ್ರಸಿದ್ಧ ವೈದ್ಯರೂ ಆದ ಡಾ. ಸಿ. ಪಳನಿವೇಲು ಅವರಿಗೆ ಹುಲಿನಾಯ್ಕರ್ ಮತ್ತು ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಜೀವಮಾನ ಸಾಧನಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಒಬ್ಬ ವ್ಯಕ್ತಿಯ ಮಹಾನ್ ಸಾಧನೆ ಎಂದರೆ ಅದು ನಿಜಕ್ಕೂ ಸಮಾಜಕ್ಕೆ ದಾರಿ ತೋರುವ ಬೆಳಕು. ಸಮುದಾಯ ಮತ್ತು ಜನರ ಬಾಳನ್ನು ಬೆಳಗುವ ದಿವ್ಯಶಕ್ತಿ. ಅದರಲ್ಲೂ ವೈದ್ಯರ ಅಪ್ರತಿಮ ಸಾಧನೆ ಎಂದರೆ ಆರೋಗ್ಯ ಸಮಾಜಕ್ಕೆ ದಾರಿದೀಪ. ಅಂದಿನ ವೇದಿಕೆ ಸಮಾರಂಭದಲ್ಲಿ ಮಾತನಾಡಿದ ವ್ಯಕ್ತಿಗಳ ಮಾತಿನ ಸಾರಾಂಶ ಇಂತಿದೆ.

**ಡಾ.ಸಿ. ಪಳನಿವೇಲು**

**ಲ್ಯಾಪ್ರೋಸ್ಕೋಪಿಕ್, ರೊಬೋಟಿಕ್ ಹಾಗೂ ಕ್ಯಾನ್ಸರ್‌ತಜ್ಞ:**

"ಕೌಶಲ ಮತ್ತು ಸಮಯವನ್ನು ಸದುಪಯೋಗಿಸಿಕೊಂಡರೆ ಭಾರತ ವಿಶ್ವದ ಮುಂಚೂಣಿ ರಾಷ್ಟ್ರವಾಗಲಿದೆ. ಭಾರತೀಯರು ಮೂಲತಃ ಕೌಶಲಪ್ರಜ್ಞೆಯ ಜನರು. ಬೇಡವಾದ ಕೆಲಸಕ್ಕೆ ಸಮಯ ಕಳೆಯುವುದರಿಂದ ಯಾವ ಸಾಧನೆಯನ್ನೂ ಮಾಡಲಾಗುವುದಿಲ್ಲ. ಇತ್ತೀಚಿನ ಗೂಗಲ್ ಸಮೀಕ್ಷೆ ವರದಿಯಂತೆ ಶೇಕಡ 80ರಷ್ಟು ಜನ ಸಾಮಾಜಿಕ ಮಾಧ್ಯಮ ಮೂಲಕ ಸಮಯವನ್ನು ಪೋಲುಮಾಡುತ್ತಿದ್ದಾರೆ. ಇದನ್ನು ಒಳ್ಳೆಯ ಉದ್ದೇಶಕ್ಕೆ ಬಳಸಿಕೊಂಡರೆ ಮಹತ್ತರ ಸಾಧನೆ ಮಾಡಬಹುದು ಎಂಬುದಕ್ಕೆ ಎಲ್ಲರಿಗೂ ಪ್ರೇರಣಾಶಕ್ತಿಯಾಗಿರುವ ಡಾ. ಹುಲಿನಾಯ್ಕರ್ ಅವರೇ ಪ್ರತ್ಯಕ್ಷಸಾಕ್ಷಿ.

ಅಂತಾರಾಷ್ಟ್ರೀಯ ವೈದ್ಯಕೀಯ ಸಮ್ಮೇಳನದಲ್ಲಿ ಭಾರತೀಯರಿಗೆ ಮಾತನಾಡುವ ಅಥವಾ ಪ್ರಬಂಧ ಮಂಡಿಸುವ ಅವಕಾಶ ಮಾತ್ರ ಲಭಿಸಲಿದೆ. ಆದರೆ ಲೈವ್ ಶಸ್ತ್ರಚಿಕಿತ್ಸೆ ಪ್ರದರ್ಶನ ಅವಕಾಶವನ್ನು ಗಳಿಸಿಕೊಂಡ ಮೊಟ್ಟಮೊದಲ ಭಾರತೀಯ ವೈದ್ಯ ಎಂಬ ಕೀರ್ತಿ ನನಗಿದೆ. ಅದರಂತೆ ವಿಶ್ವದ 40 ರಾಷ್ಟ್ರಗಳಲ್ಲಿ ಲೈವ್ ಶಸ್ತ್ರಚಿಕಿತ್ಸೆ ನಡೆಸಿದ್ದೇನೆ. ಇದು ಯೋಗಾಯೋಗವೇ ಸರಿ.

ವೈದ್ಯಕೀಯ ಇತಿಹಾಸದಲ್ಲಿ ಭಾರತೀಯರ ಪ್ರತಿಭೆ ಅನನ್ಯವಾದದ್ದು. ಸಾವಿರಾರು ವರ್ಷಗಳ ಹಿಂದೆಯೇ ಭಾರತದಲ್ಲಿ ಶಸ್ತ್ರಚಿಕಿತ್ಸೆ ನಡೆಸಿರುವ ಇತಿಹಾಸವಿದೆ. ಅಮೆರಿಕಾ ಸೇರಿದಂತೆ ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಶಸ್ತ್ರಚಿಕಿತ್ಸೆ ಎಂಬುದು ಕೇವಲ 300–400 ವರ್ಷಗಳಿಂದ ಬಂದಿರುವ ಪದ್ಧತಿಯಾಗಿದೆ. ಹೀಗಾಗಿ ಭಾರತೀಯರಲ್ಲಿ ಪ್ರತಿಭೆಗೆ ಯಾವುದೇ ಕೊರತೆ ಇಲ್ಲ. ಅನಗತ್ಯ ಅನುಕರಣೆ ಬೇಕಾಗಿಲ್ಲ, ನಮ್ಮ ಸ್ವಂತ ಬುದ್ಧಿ–ವಿವೇಕದಿಂದ ಕೌಶಲ್ಯ ವೃದ್ಧಿಸಿಕೊಳ್ಳಬೇಕು. ಇದು ವೈದ್ಯವೃತ್ತಿಯಲ್ಲಿ ನಾನು ಕಲಿತುಕೊಂಡ ಪಾಠ. ಭಾರತೀಯ ಕೌಟುಂಬಿಕ ಪದ್ಧತಿ ಜಗತ್ತಿಗೆ ಮಾದರಿಯಾಗಿದೆ, ಜಪಾನ್, ಜರ್ಮನಿಯಂತಹ ಮುಂದುವರಿದ ರಾಷ್ಟ್ರಗಳು ನಮ್ಮ ಕೌಟಂಬಿಕ ಪದ್ಧತಿ ಅನುಸರಿಸುತ್ತಿವೆ. ಇದರಿಂದ ಭಾರತದ ಕೌಟಂಬಿಕ ಮತ್ತು ಧಾರ್ಮಿಕ ಮೌಲ್ಯದ ಶಕ್ತಿ ಎಷ್ಟು ಎಂಬುದು ಅರ್ಥವಾಗುತ್ತದೆ. ಇಂಗ್ಲಿಷ್ ಸಂಪರ್ಕ ಭಾಷೆ. ಕೇವಲ ಇಂಗ್ಲಿಷ್ ಮಾತನಾಡಿದರೆ ಗೌರವ ಸಿಗುತ್ತದೆ ಎಂಬ ಭಾವನೆ ಸಲ್ಲದು. ಬದಲಾಗಿ ತಾಯಿ ಭಾಷೆಯನ್ನು ಪ್ರೀತಿಸಿ. ಅದರಿಂದ ನಿಮ್ಮ ವ್ಯಕ್ತಿತ್ವದ ಶೋಭೆ ಹೆಚ್ಚುತ್ತದೆ. ಅದು ನಿಮ್ಮ ಮೂಲ ಸೆಲೆ.

▶▶ 6ನೇ ಪುಟಕ್ಕೆ...

▶▶ ಮೊದಲನೇ ಪುಟದಿಂದ

# ಮಧ್ಯಪ್ರಾಚ್ಯದಲ್ಲಿನ ಯುದ್ಧ: ಹಲವು ವಿಷಯಗಳಲ್ಲಿ ಗೊಂದಲ

ಇಡೀ ಸಾಮಾಜಿಕಜೀವನ ಅಸ್ತವ್ಯಸ್ತಗೊಳ್ಳುತ್ತವೆ – ವಾಸ್ತವತೆಯ ಈ ಕರಾಳಮುಖವನ್ನು ಇತಿಹಾಸದ ಪುಟಗಳು ನಮ್ಮ ಮುಖಕ್ಕೆ ರಾಚುತ್ತವೆ. ಇದನ್ನು ಪ್ರಸ್ತುತ ನಡೆಯುತ್ತಿರುವ ಮಧ್ಯಪ್ರಾಚ್ಯ ಯುದ್ಧವೂ ನೆನಪಿಸುತ್ತಿದೆ.

**ಇಸ್ರೇಲ್–ಇರಾನ್ ಯುದ್ಧದ ಮೂಲ:**

ಇಸ್ರೇಲ್–ಇರಾನ್‌ಗಳ ನಡುವಿನ ದ್ವೇಷದ ಮೂಲವನ್ನು ಅರಿಯದೆ ಇದ್ದರೆ ಪ್ರಸಕ್ತ ಯುದ್ಧದ ಕಾರಣಗಳು ಸಂಪೂರ್ಣವಾಗಿ ನಮಗೆ ತಿಳಿಯುವುದಿಲ್ಲ. ಈ ದ್ವೇಷದ ಬೀಜವು 1948ರಲ್ಲಿ ಇಸ್ರೇಲ್ ತನಗಾಗಿ ಒಂದು ದೇಶವನ್ನು ಘೋಷಿಸಿಕೊಂಡಾಗಲೇ ಬಿತ್ತಲ್ಪಟ್ಟಿತು. ಅಂದಿನಿಂದಲೇ ಇಸ್ರೇಲ್ ಮತ್ತು ಅರಬ್ ದೇಶಗಳ ನಡುವೆ ಬಗೆಹರಿಯದ ವಿವಾದಗಳು ಮತ್ತು ಬಿಕ್ಕಟ್ಟುಗಳು ಪ್ರಾರಂಭವಾದವು. ಪ್ಯಾಲೆಸ್ಟೈನ್ ದೇಶ, ಇಸ್ರೇಲ್ ದೇಶಗಳ ನಡುವಿನ ಗಡಿಯ ಪ್ರಶ್ನೆ, ಗಾಜಾಪಟ್ಟಿಯನ್ನು ಕುರಿತ ವಿವಾದ, ಹಾಗೂ ಎರಡೂ ದೇಶಗಳ ಅಸ್ಮಿತೆಯ ಪ್ರಶ್ನೆ – ಇವು ಇಲ್ಲಿಯವರೆಗೂ ಪರಿಹಾರವನ್ನು ಕಂಡಿಲ್ಲ.

ಪ್ಯಾಲೆಸ್ಟೈನ್ ತನ್ನ ಸ್ವತಂತ್ರ ಅಸ್ತಿತ್ವ ಹಾಗೂ ಹಕ್ಕುಗಳಿಗಾಗಿ ಒತ್ತಾಯಿಸುತ್ತಲೇ ಇದ್ದರೆ, ಇಸ್ರೇಲ್ ತನ್ನ ರಾಷ್ಟ್ರೀಯ ಸಮಗ್ರತೆ ಮತ್ತು ಭದ್ರತೆಗಳ ಉಳಿವಿಗಾಗಿ ತನ್ನ ಹೋರಾಟವನ್ನು ಮುಂದುವರಿಸುತ್ತಿದೆ. ಅಂತಾರಾಷ್ಟ್ರೀಯ ವೇದಿಕೆಗಳಿಂದ ಒಡಂಬಡಿಕೆಗಳಿಗಾಗಿ ಮತ್ತೆ ಮತ್ತೆ ನಡೆಸಲ್ಪಡುತ್ತಿದ್ದ ಎಲ್ಲಾ ಪ್ರಯತ್ನಗಳೂ ವಿಫಲಗೊಂಡು, ಶಾಶ್ವತ ಪರಿಹಾರವೆನ್ನುವುದು ಇನ್ನೂ ಮರೀಚಿಕೆಯಾಗಿಯೇ ಉಳಿದುಕೊಂಡಿದೆ.

ಈ ತಕರಾರು, ದಿನಕಳೆದಂತೆ ಬೆಳೆಯುತ್ತಾ ಬಂದು ಇಸ್ರೇಲ್ ಮತ್ತು ಅರಬ್ ದೇಶಗಳ ನಡುವೆ ಒಂದು ಪೆಡಂಭೂತವಾಗಿ ಸಂಬಂಧಪಟ್ಟ ಎಲ್ಲ ದೇಶಗಳನ್ನೂ ಕಾಡುತ್ತಿದೆ. ಇರಾನ್ ದೇಶವು ಪ್ಯಾಲೆಸ್ಟೈನ್ ದೇಶದ ಬೇಡಿಕೆಗಳಿಗೆ ತನ್ನ ಸಂಪೂರ್ಣ ಬೆಂಬಲವನ್ನು ಘೋಷಿಸಿ ಅದರ ಬೆನ್ನಿಗೆ ನಿಂತಿದೆ. ಇಸ್ರೇಲ್ ಮತ್ತು ಇರಾನ್‌ಗಳ ನಡುವಿನ ಭಿನ್ನಾಭಿಪ್ರಾಯಗಳು ಸೈಬರ್ ಆಕ್ರಮಣ, ಗೂಢಚರ್ಯೆ, ಕೆಲವು ಪ್ರಮುಖರ ಹತ್ಯೆಗಳ ಮಟ್ಟದಲ್ಲಿ ಅಪ್ರತ್ಯಕ್ಷವಾಗಿ ಕಾಣಿಸಿಕೊಂಡಿದ್ದರೂ, ಇಲ್ಲಿಯವರೆಗೆ ಪೂರ್ಣಪ್ರಮಾಣದ ಯುದ್ಧವನ್ನು ಪ್ರೇರಿಸುವ ಹಂತವನ್ನು ತಲುಪಿರಲಿಲ್ಲ. ಆದರೂ ಈ ಎರಡು ದೇಶಗಳವರು ಪರಸ್ಪರ ನೋಡುವ ದೃಷ್ಟಿಯು ಯಾವಾಗಲೂ ಸಂಶಯದಿಂದ ಕೂಡಿದ್ದವು.

**ಬೆಂಕಿಗೆ ಸುರಿದ ತುಪ್ಪ:**

2023ರಲ್ಲಿ ಅಲ್ಲಿಯವರೆಗೂ ಕಂಡು ಕೇಳರಿಯದಂತಹ ಸ್ಫೋಟವೊಂದು ಸಂಭವಿಸಿತು. ಅದೆಂದರೆ, ಹಮಾಸಿನ ಉಗ್ರರು ಇಸ್ರೇಲಿನ ಮೇಲೆ ತೀವ್ರತರವಾದ ದಾಳಿಯನ್ನು ನಡೆಸಿದುದು. ಇದರಿಂದ ಅನೇಕ ಅಂತಾರಾಷ್ಟ್ರೀಯ ನಾಯಕರಿಗೆ ಆಘಾತವುಂಟಾಯಿತು. ಇದಕ್ಕೆ ಪ್ರತ್ಯುತ್ತರವಾಗಿ ಇಸ್ರೇಲ್ ಗಾಜಾಪಟ್ಟಿಯ ಮೇಲೆ ಅಭೂತಪೂರ್ವವಾದ ದಾಳಿಯನ್ನು ನಡೆಸಿ, ಹಮಾಸಿನಲ್ಲಿದ್ದ ಉಗ್ರರ ಮತ್ತು ಮಿಲಟರಿಯ ನೆಲೆಗಳನ್ನೂ ನಾಶಮಾಡಿತು. ಇದರಿಂದಾಗಿ, ಎರಡೂ ಕಡೆಗಳಲ್ಲಿ, ಬಹುದೊಡ್ಡ ಪ್ರಮಾಣದಲ್ಲಿ ಆರ್ಥಿಕತೆಗೆ ಹೊಡೆತ ಬಿದ್ದಿತು.

ಗಾಜಾಪಟ್ಟಿಯಲ್ಲಿ ಪ್ರಾರಂಭವಾದ ಘರ್ಷಣೆ, ಇತರ ಕಡೆಗಳಿಗೂ ಹರಡಿತು. ಲೆಬನಾನ್‌ನಲ್ಲಿದ್ದ ಹೆಜಬೊಲ್ಲಾ ಗುಂಪು ಇಸ್ರೇಲಿನ ಮೇಲೆ ರಾಕೆಟ್‌ಗಳ ಮಳೆಯನ್ನು ಕರೆದು, ಅಪಾರ ಹಾನಿಯನ್ನುಂಟುಮಾಡಿತು.

ಈ ಯುದ್ಧವು ಪ್ಯಾಲಿಸ್ಟೈನ್‌ನ ಮೂಲ ನಿವಾಸಿಗಳಿಗೆ ದೊಡ್ಡ ಆಘಾತವನ್ನು ಉಂಟು ಮಾಡಿದೆ. ಅಲ್ಲಿ ಭಯೋತ್ಪಾದನೆ ಚಟುವಟಿಕೆಗಳು ಉದಯವಾಗಲು ಇಸ್ರೇಲ್ ಕಾರಣವೆಂದು ರಾಜತಾಂತ್ರಜ್ಞರು ಅಭಿಪ್ರಾಯಪಡುತ್ತಾರೆ.

ಇದರ ಅನಂತರ 2024 ಮತ್ತು 2025ರಲ್ಲಿ ಇರಾನಿನ ಬೆಂಬಲವನ್ನು ಪಡೆದ ಭಯೋತ್ಪಾದಕರು ಈ ಘರ್ಷಣೆಯಲ್ಲಿ ತಮ್ಮನ್ನೂ ತೊಡಗಿಸಿಕೊಂಡರು. ಜೊತೆಗೆ ಇರಾಕ್ ಮತ್ತು ಸಿರಿಯಾ ದೇಶಗಳಲ್ಲಿ ಸಕ್ರಿಯವಾಗಿದ್ದ ಶಸ್ತ್ರಸಜ್ಜಿತ ಗುಂಪುಗಳು ಅಮೆರಿಕ ಮತ್ತು ಇಸ್ರೇಲನ್ನು ಗುರಿಯಾಗಿಸಿಕೊಂಡು ಮತ್ತೆ ಮತ್ತೆ ದಾಳಿಯನ್ನು ನಡೆಸಿದವು. ಇದಕ್ಕೆ ಪ್ರತಿಯಾಗಿ ಇಸ್ರೇಲ್ ಸಕಲ ಸನ್ನಾಹದೊಂದಿಗೆ ಈ ಗುಂಪುಗಳಿಗೆ ತಿರುಗೇಟನ್ನು ಕೊಡುವುದರ ಜೊತೆಗೆ ಇರಾನಿನ ಹಲವಾರು ಆಯಕಟ್ಟಿನ ಪ್ರದೇಶಗಳ ಮೇಲೆ ಕೂಡ ದಾಳಿಮಾಡಿತು. ಮೊದಮೊದಲು ಚಿಕ್ಕದಾಗಿ ಪ್ರಾರಂಭವಾದ ಘರ್ಷಣೆಗಳು ಅಂತಿಮವಾಗಿ ಪೂರ್ಣಪ್ರಮಾಣದ ಯುದ್ಧದ ಸ್ವರೂಪವನ್ನು ಪಡೆಯಿತು.

> **ಇರಾನ್ ತನ್ನ ಮಿಲಿಟರಿ ಬಲವನ್ನು ಹೆಚ್ಚಿಸಿಕೊಳ್ಳುತ್ತಿರುವುದನ್ನು, ಪರಮಾಣು ಅಸ್ತ್ರಗಳನ್ನು ತಯಾರಿಸಿಟ್ಟುಕೊಳ್ಳುವುದನ್ನು ವಿಶ್ವಕ್ಕೆ, ಅದರಲ್ಲಿಯೂ ಮಧ್ಯಪ್ರಾಚ್ಯ ಮತ್ತು ಯೂರೋಪ್ ದೇಶಗಳ ಸಾರ್ವಭೌಮತ್ವಕ್ಕೆ ಬೆದರಿಕೆಯನ್ನು ಒಡ್ಡುತ್ತದೆ ಎಂದೇ ಇಸ್ರೇಲ್ ಭಾವಿಸುತ್ತದೆ. ಹಾಗೇಯೇ, ಇಸ್ರೇಲ್ ಮತ್ತು ಪಾಶ್ಚಾತ್ಯ ದೇಶಗಳ ನಡುವಿನ ಬಾಂಧವ್ಯವು ಮಧ್ಯಪ್ರಾಚ್ಯದ ಸಮತೋಲನದ ಸ್ಥಿತಿಯನ್ನು ಹದಗೆಡಿಸುತ್ತದೆ ಎಂದು ಇರಾನ್ ಭಾವಿಸುತ್ತದೆ. ಈ ಅವಿಶ್ವಾಸ, ಅಪನಂಬಿಕೆಗಳು ಇಂದು ವಿವಿಧ ಆಯಾಮಗಳನ್ನು ಪಡೆದುಕೊಂಡು ಸಮನ್ವಯ ಬಾಳ್ವೆಗೆ, ಅಂತಾರಾಷ್ಟ್ರೀಯ ಶಾಂತಿಗೆ ಧಕ್ಕೆಯನ್ನು ಉಂಟು ಮಾಡುತ್ತಿವೆ.**

**ವಿಶ್ವದಾದ್ಯಂತ ಆರ್ಥಿಕತೆಯಲ್ಲಿ ತಲ್ಲಣ:**

ಆಧುನಿಕ ಆರ್ಥಿಕತೆಯು ವಿಶ್ವದ ವಿವಿಧ ದೇಶಗಳಲ್ಲಿ ನಡೆಯುವ ವಿದ್ಯಮಾನದೊಂದಿಗೆ ಹೆಣೆದುಕೊಂಡಿರುತ್ತದೆ ಮತ್ತು ಯಾವುದೇ ಎರಡು ದೇಶಗಳ ನಡುವಿನ ಯುದ್ಧವು ಅವುಗಳಿಗೆ ಮಾತ್ರ ಸೀಮಿತವಾಗದೆ ಅದರ ಅನಿಷ್ಟ ಪ್ರಭಾವ ಹಲವು ದೇಶಗಳ ಮೇಲೆ ಬೀಳುತ್ತದೆ. ಅದರಲ್ಲಿಯೂ ಮಧ್ಯಪ್ರಾಚ್ಯವು ಇಡೀ ವಿಶ್ವದ ತೈಲಾಧಾರಿತ ಶಕ್ತಿಯ ಕೇಂದ್ರಬಿಂದುವಾಗಿರುವುದರಿಂದ, ಅಲ್ಲಿ ನಡೆಯುವ ಯುದ್ಧದ ಪರಿಣಾಮಗಳು ಇಡೀ ವಿಶ್ವದ ಮಾರುಕಟ್ಟೆಯಲ್ಲಿ ತೀವ್ರತರವಾದ ಕಂಪನವನ್ನು ಉಂಟು ಮಾಡುತ್ತದೆ.

ಮಧ್ಯಪ್ರಾಚ್ಯದಲ್ಲಿ ಇರಾನ್ ತೈಲ ಮತ್ತು ನೈಸರ್ಗಿಕ ಅನಿಲಗಳ ಉತ್ಪಾದನೆಯಲ್ಲಿ ಅತಿ ಹೆಚ್ಚಿನ ಪ್ರಾಮುಖ್ಯವನ್ನು ಪಡೆದಿರುವ ದೇಶವಾಗಿದೆ. ಇಲ್ಲಿ ಸಂಭವಿಸುವ ಸಣ್ಣಪುಟ್ಟ ಘಟನೆಗಳೂ ಜಗತ್ತಿನ ತೈಲ ಮಾರುಕಟ್ಟೆಯಲ್ಲಿ ಅಲ್ಲೋಲಕಲ್ಲೋಲವನ್ನು ಉಂಟು ಮಾಡುತ್ತವೆ ಮತ್ತು ಸರಬರಾಜಿನಲ್ಲಿನ ವ್ಯತ್ಯಯವು ತೈಲದ ಬೆಲೆಯನ್ನು ಆಕಾಶದೆತ್ತರಕ್ಕೆ ಕೊಂಡೊಯ್ಯುತ್ತದೆ.

ತೈಲಾಧಾರಿತ ಶಕ್ತಿಯ ಬೆಲೆಗಳು ಏರಿದರೆ ವಿಶ್ವದ ಆರ್ಥಿಕತೆಯಲ್ಲಿ ತೀವ್ರವಾದ ಏರುಪೇರುಗಳುಂಟಾಗುತ್ತವೆ. ಸಾರಿಗೆ ವ್ಯವಸ್ಥೆ, ಉತ್ಪಾದನೆಯ ವೆಚ್ಚಗಳು ವಿಪರೀತವಾಗಿ ಏರುತ್ತವೆ. ಇದರ ಪರಣಾಮ ಅಭಿವೃದ್ಧಿಶೀಲ ದೇಶಗಳ ಮೇಲೆ ತೀವ್ರವಾಗಿರುತ್ತವೆ ಮತ್ತು ಅವು ತೈಲಗಳ ಆಮದಿಗಾಗಿ ತಮ್ಮ ಒಟ್ಟು ಆದಾಯದ ಬಹುಪಾಲನ್ನು ಖರ್ಚುಮಾಡಬೇಕಾಗಿ ಬರುತ್ತದೆ.


Donald Trump


Benjamin Netanyahu


Mojtaba Khamenei

ಯುದ್ಧವು ಪ್ರಾರಂಭವಾದ ಮೇಲೆ ಇರಾನ್ ತೆಗೆದುಕೊಂಡ ತೀರ್ಮಾನದಿಂದಾಗಿ ಯೂರೋಪ್, ಏಷಿಯಾ ಮತ್ತು ಆಫ್ರಿಕಾ ಖಂಡಗಳಿಗೆ ತೈಲವನ್ನು ಸರಬರಾಜು ಮಾಡುತ್ತಿದ್ದ ಸಮುದ್ರ ಮಾರ್ಗವು ಮುಚ್ಚಲ್ಪಟ್ಟಿದೆ. ಇದರಿಂದ ಅಂತಾರಾಷ್ಟ್ರೀಯ ವ್ಯಾಪಾರ ವಹಿವಾಟು ಸ್ಥಗಿತಗೊಂಡಿದೆ ಮತ್ತು ಪರ್ಯಾಯ ಮಾರ್ಗಗಳು ಬಹಳ ದುಬಾರಿಯಾಗಿವೆ.

ಅಂದರೆ, ಮಧ್ಯಪ್ರಾಚ್ಯದಲ್ಲಿ ಆಗುತ್ತಿರುವ ಯುದ್ಧವು ಇಡೀ ವಿಶ್ವದ ಆರ್ಥಿಕತೆಯ ಮೇಲೆ ಶೀಘ್ರವಾಗಿ ದುಷ್ಪರಿಣಾಮಗಳನ್ನು ಬೀರುತ್ತಿದೆ.

**ಯುದ್ಧದ ಹಾನಿಯು ಆರ್ಥಿಕತೆಗೆ ಇಂಬನ್ನು ಕೊಡುತ್ತದೆಯೇ?**

ಕೆಲವು ವಿಶ್ಲೇಷಕರು ಯುದ್ಧದ ಪರಿಣಾಮವು ಆರ್ಥಿಕತೆಯ ಪ್ರಗತಿಗೆ ಸಹಾಯವನ್ನು ಮಾಡುತ್ತದೆ ಎಂದು ಹೇಳುತ್ತಾರೆ. ಇದಕ್ಕೆ ಇಂಗ್ಲಿಷಿನಲ್ಲಿ 'Broken window theory' ಎನ್ನುತ್ತಾರೆ. ಅವರ ಪ್ರಕಾರ ಯುದ್ಧಾನಂತರ ಉತ್ಪಾದನೆಯ ಚಟುವಟಿಕೆಗಳು ತೀವ್ರಗೊಳ್ಳುತ್ತವೆ ಮತ್ತು ಹೊಸ ತಂತ್ರಜ್ಞಾನಗಳ ಆವಿಷ್ಕಾರವಾಗುತ್ತವೆ. ಇದು ಆರ್ಥಿಕತೆಯನ್ನು ಪ್ರಗತಿಯತ್ತ ನಡೆಸುತ್ತದೆ ಎಂಬುದು ಅವರ ವಾದ. ಆದರೆ, ಇಂತಹ ವಾದಗಳು ಯುದ್ಧದಿಂದಾದ ಹಾನಿ ಮತ್ತು ಪುನಾರಚನೆಯ ವೆಚ್ಚಗಳ ಭಾರ ಮೊದಲಾದವುಗಳನ್ನು ಮರೆಮಾಚುತ್ತವೆ.

ಶಿಕ್ಷಣ, ಆರೋಗ್ಯ, ಸಾಮಾಜಿಕ ಉದ್ದೇಶಗಳಿಗಾಗಿ ಮಾಡಬೇಕಿದ್ದ ವೆಚ್ಚಗಳನ್ನು ದೇಶದ ಪುನರ್ನಿರ್ಮಾಣವನ್ನು ಮಾಡಲು, ವ್ಯಯಿಸಬೇಕಾಗುತ್ತದೆ. ಸರ್ಕಾರಗಳು ಶಸ್ತ್ರಾಸ್ತ್ರಗಳಿಗಾಗಿ, ರಕ್ಷಣಾ ಕಾರ್ಯಕ್ರಮಗಳಿಗಾಗಿ, ಯುದ್ಧದಿಂದ ಹಾಳಾದ ರಸ್ತೆಗಳ ಮತ್ತು ಸಂಪರ್ಕ ವ್ಯವಸ್ಥೆಗಳ ರಿಪೇರಿಗಾಗಿ ಹೆಚ್ಚಿನ ಹಣವನ್ನು ಮೀಸಲಿಡಬೇಕಾಗುತ್ತದೆ. ಅಂದರೆ, ಯುದ್ಧಾನಂತರ ಸರ್ಕಾರವು ಮಾಡುವ ವೆಚ್ಚಗಳು ಯುದ್ಧದಿಂದುಂಟಾದ ಹಾನಿಯನ್ನು ಸರಿಪಡಿಸಲು ವೆಚ್ಚವಾಗುತ್ತವೆ. ಇದು ನೈಜ ಅರ್ಥದಲ್ಲಿ ಅಭಿವೃದ್ಧಿಗಾಗಿ ಮಾಡಿದ ವೆಚ್ಚವಲ್ಲ. ಈ ವೆಚ್ಚಗಳ ಜೊತೆಗೆ ಪ್ರಜೆಗಳು ತಮ್ಮ ದೈನಂದಿನ ಜೀವನದಲ್ಲಿ ಅನುಭವಿಸಬೇಕಾಗಿರುವ ತೊಂದರೆಗಳನ್ನು, ಶಿಕ್ಷಣದ ವಿಷಯದಲ್ಲಿ ವಿದ್ಯಾರ್ಥಿಗಳು ಅನುಭವಿಸಬೇಕಾಗಿ ಬರುವ ಕಷ್ಟಗಳನ್ನು ಹಣಕಾಸಿನ ದೃಷ್ಟಿಯಿಂದ ಅಳೆಯಲು ಸಾಧ್ಯವಿರುವುದಿಲ್ಲ.

**ವಿಪತ್ತನ್ನು ಮೌನವಾಗಿ ಸಹಿಸುವ ಜನತೆ:**

ಭೌತಿಕ ಮತ್ತು ಆರ್ಥಿಕ ಹಾನಿಗಳ ಜೊತೆಜೊತೆಗೇ ಸಂಭವಿಸುವ ಕಷ್ಟವೆಂದರೆ ಸಾಮಾನ್ಯ ಜನತೆಯು ಅನಿವಾರ್ಯವಾಗಿ ಅನುಭವಿಸುವ ವಿಪತ್ಪರಂಪರೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧವು ಇಂತಹ ಅನಿವಾರ್ಯ ವಿಪತ್ತನ್ನು ತಂದೊಡ್ಡಿದೆ. ಮನೆಗಳು, ಶಾಲೆಗಳು ಮತ್ತು ಆಸ್ಪತ್ರೆಗಳು ನಾಶವಾಗಿರುವುದರಿಂದ ಜನರು ಕಂಗಾಲಾಗಿದ್ದಾರೆ. ಅಲ್ಲಿ ಆರೋಗ್ಯಸೇವೆಯ ಪರಿಸ್ಥಿತಿ ಮೂರಾಬಟ್ಟೆಯಾಗಿದೆ. ಆಸ್ಪತ್ರೆಗಳಿಗೆ ಔಷಧಗಳು ಸರಬರಾಜಾಗುತ್ತಿಲ್ಲ, ಸಾಮಾನ್ಯರ ಜೀವವನ್ನು ಉಳಿಸುವ ನಿಟ್ಟಿನಲ್ಲಿ ಆಸ್ಪತ್ರೆಯ ಆಡಳಿತವರ್ಗ ತೀವ್ರವಾದ ಒತ್ತಡಕ್ಕೆ ಸಿಲುಕಿಕೊಂಡಿದೆ. ಸಂಕಷ್ಟದಲ್ಲಿ ಸಿಲುಕಿರುವವರ ಸೇವೆಯನ್ನು ಮಾಡುತ್ತಿರುವ ಆರೋಗ್ಯ ಕಾರ್ಯಕರ್ತರೂ ಅಪಾಯದ ಸುಳಿಯಲ್ಲಿ ಸಿಲುಕಿದ್ದಾರೆ. ಇದರಿಂದಾಗಿ ಪರಿಹಾರ ಕಾರ್ಯಗಳು ಹೆಚ್ಚು ಕಡಮೆ ಸ್ಥಗಿತಗೊಂಡಿವೆ.

**ನಿರಾಶ್ರಿತರು ಮತ್ತು ಗುಳೆಯ ಸ್ಥಿತಿ:**

ಯುದ್ಧವು ಜನರನ್ನು ನಿರ್ವಾಸಿತರನ್ನಾಗಿಸಿದೆ. ನಿರಾಶ್ರಿತರಾದವರಲ್ಲಿ ಕೆಲವರು ಅಲ್ಲಿ ಇಲ್ಲಿ ಸೂರನ್ನು ಕಂಡುಕೊಂಡರೆ ಉಳಿದವರು ಆಶ್ರಯ ಮತ್ತು ಆಹಾರ, ಹಾಗೂ ವೈದ್ಯಕೀಯ ಸೇವೆಗಳಿಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಬೇರೆ ಬೇರೆ ಪ್ರದೇಶಗಳಿಗೆ ಅಥವಾ ಅಪರಿಚಿತ ದೇಶಗಳಿಗೆ ಗುಳೆ ಹೋಗುತ್ತಿದ್ದಾರೆ. ಈ ಸಂದರ್ಭದಲ್ಲಿ ಹತ್ತು ಹಲವು ರೋಗಗಳು ಹರಡುತ್ತವೆ ಮತ್ತು ಒಟ್ಟಾರೆಯಾಗಿ ಆರೋಗ್ಯ ಪರಿಸ್ಥಿತಿ ಸುಧಾರಿಸಲು ಅಸಾಧ್ಯವೆನಿಸುಷ್ಟು ಬಿಗಡಾಯಿಸುತ್ತದೆ.

ಇಷ್ಟೇ ಅಲ್ಲದೆ, ಮೇಲ್ನೋಟಕ್ಕೆ ಕಾಣಿಸದ ಮಾನಸಿಕ ಕ್ಲೇಶಗಳು ಸಾಮಾನ್ಯರನ್ನು ಒಳಗಿನಿಂದಲೇ ತಿನ್ನುತ್ತಿರುತ್ತವೆ. ಅವರ ಮನಸ್ಸಿನ ಮೇಲಾಗುವ ಗಾಯಗಳು ಮಾಯಲು ನಾಲ್ಕಾರು ತಲೆಮಾರುಗಳೇ ಬೇಕಾಗುತ್ತವೆ. ಮಕ್ಕಳ ಮನಸ್ಸಿನ ಮೇಲೆ ಯುದ್ಧವು ತೀವ್ರವಾದ ಆಘಾತವನ್ನುಂಟು ಮಾಡಿರುತ್ತವೆ. ಯುದ್ಧದ ಅನಾಹುತದಿಂದಾಗಿ ಹಲವಾರು ಮಕ್ಕಳು ತಮ್ಮ ಪಾಲಕರನ್ನೂ ಕಳೆದುಕೊಳ್ಳುವುದು ಅಸಂಭವವೇನಲ್ಲ. ಬಹುತೇಕ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆ. ಅದರ ಪರಿಣಾಮವಾಗಿ ತಮ್ಮ ಭವಿಷ್ಯದ ಹಾದಿಯನ್ನೂ ಅವರು ಕಳೆದುಕೊಳ್ಳುತ್ತಾರೆ. ಯುದ್ಧವು ಅವರ ಮನಸ್ಸಿನ ಮೇಲೆ ಮಾಡಿರುವ ಆಘಾತದಿಂದ ಜೀವನದ ಬಗೆಗೆ, ಇತರರ ಬಗೆಗೆ ಮೂಡಿರುವ ಕಹಿಭಾವನೆ, ಸಂಶಯದ ಮನೋಭಾವಗಳು ಅಳಿಸಿಹೋಗಲು ಕೆಲವು ದಶಕಗಳೇ ಬೇಕಾಗುತ್ತದೆ.

**ಈಗಿನ ಅಗತ್ಯ ಮುತ್ಸದ್ದಿತನ:**

ಪ್ರಸಕ್ತ ಯುದ್ಧದ ಹಿಂದಿರುವ ಉದ್ದೇಶ ಹಾಗೂ ಯುದ್ಧದ ಪರಿಣಾಮಗಳನ್ನು ವಿಶ್ಲೇಷಿಸಿದಾಗ ನಮಗೆ ಎದುರಾಗುವ ಪ್ರಶ್ನೆಯೆಂದರೆ ಇಂತಹ ಯುದ್ಧಗಳಿಂದ ನಾವು ಸಾಧಿಸುವುದಾದರೂ ಏನು ಎಂಬುದು.

ಮಿಲಿಟರಿ ಉದ್ದೇಶಗಳು ಈಡೇರಿದರೂ, ಅದಕ್ಕಾಗಿ ನಾವು ತೆರಬೇಕಾಗಿರುವ ಮಾನವ ಸಂಪನ್ಮೂಲ ಮತ್ತು ಆರ್ಥಿಕತೆಯ ಮೇಲಿನ ಹಾನಿಗಳ ಬೆಲೆ ನಮ್ಮ ಊಹೆಗೂ ನಿಲಕದ್ದು.

▶▶ 4ನೇ ಪುಟಕ್ಕೆ...

ಪತ್ರಿಕೆಯ ಬಳಗ

ಸಹಾಯಕ ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು:
**ಎನ್. ಆನಂದ**

ಪುಟ ವಿನ್ಯಾಸ:
**ಸುಮಾ ಸಾಗರ್**

# ಪರಂಪರೆಯ ಶ್ರೇಷ್ಠತೆಯನ್ನು ಬೆಳಗಿಸುವ ಪ್ರೇರಣಾ ದಿವಸ

ಮನದ ಮಾತು



**ಡಾ. ರಮಣ್ ಎಂ ಹುಲಿನಾಯ್ಕರ್**
**ಕಾರ್ಯನಿರ್ವಾಹಕ ಸಂಪಾದಕರು**
**ನಿರ್ದೇಶಕರು, ಶ್ರೀದೇವಿ ವೈದ್ಯಕೀಯ ಕಾಲೇಜು**




ನವೆಂಬರ್ 26, 2023ರಂದು, ಶ್ರೀದೇವಿ ಕ್ಯಾಂಪಸ್ ಪ್ರೀತಿಯ ಸಮುದ್ರವಾಗಿತ್ತು. ಡಾ. ಎಂ. ಆರ್. ಹುಲಿನಾಯ್ಕರ್ ಅವರ ಅಮೃತ ಮಹೋತ್ಸವಕ್ಕಾಗಿ ಹತ್ತುಸಾವಿರಕ್ಕೂ ಹೆಚ್ಚು ಜನರು ಸೇರಿದ್ದರು. ಅದು ಅಗಾಧವಾದ ಕೃತಜ್ಞತೆಯ ದಿನವಾಗಿತ್ತು. ಆದರೆ ಡಾ. ಹುಲಿನಾಯ್ಕರ್ ಅನುಯಾಯಿ ಮತ್ತು ಸಿಬ್ಬಂದಿಯಲ್ಲಿ ಆಳವಾದ ಪ್ರಶ್ನೆಯೊಂದನ್ನು ಹುಟ್ಟುಹಾಕಿತು. ಡಾ. ಹುಲಿನಾಯ್ಕರ್ ಅವರ ಸಾಧನೆ ದೊಡ್ಡ ಮೈಲಿಗಲ್ಲನ್ನು ನಿರ್ಮಿಸಿದೆ. ಅವರ ಜನ್ಮದಿನಾಚರಣೆಯನ್ನು ಹೀಗೆ ಆಚರಿಸುವುದು ಎಷ್ಟರಮಟ್ಟಿಗೆ ಸರಿ ಎಂಬ ಪ್ರಶ್ನೆ ಉದ್ಭವವಾಯಿತು. ಆಗ ಹುಟ್ಟಿದ ಪರಿಕಲ್ಪನೆಯೇ "ಪ್ರೇರಣಾ ದಿವಸ". ಡಾ. ಹುಲಿನಾಯ್ಕರ್ ದಂಪತಿಗಳ ಸಾಧನೆ ಮತ್ತು ಸಿದ್ಧಿ ಅನೇಕರಿಗೆ ಪ್ರೇರಣೆ ಕೊಡುತ್ತದೆಂಬ ವಿಶ್ವಾಸ ಎಲ್ಲರಲ್ಲೂ ಇತ್ತು. ಅದರ ಮುಂದುವರಿದ ಭಾಗವೇ ಮಾರ್ಚ್ 13, 2026ರ ಸಮಾರಂಭ.

ಇಂತಹ ದೃಷ್ಟಿಕೋನದಿಂದ ಡಾ. ಎಂ.ಆರ್. ಹುಲಿನಾಯ್ಕರ್ ಹಾಗೂ ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಅವರ ಹೆಸರಿನಲ್ಲಿ ಶ್ರೇಷ್ಠ ವೈದ್ಯರಿಗೆ ಅವರ ಜೀವಮಾನ ಸಾಧನೆಗೆ ಪ್ರಶಸ್ತಿ ನೀಡಬೇಕೆಂದು ನಿರ್ಧಾರವಾಯಿತು. ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸಾಲೋಕದ ದಂತಕಥೆಯೆನಿಸಿರುವ ಡಾ. ಸಿ. ಪಳನಿವೇಲು ಅವರಿಗೆ "ಪ್ರೇರಣಾ ದಿವಸ'ದ ಪ್ರಶಸ್ತಿ ನೀಡಲು ನಿರ್ಧಾರ ಮಾಡಲಾಯಿತು.

ಆ ಸಮಾರಂಭದ ಸಂದರ್ಭದಲ್ಲಿ ಶ್ರೀದೇವಿ ವೈದ್ಯಕೀಯ ಕಾಲೇಜು ಸಭಾಂಗಣವು ವೈದ್ಯಕೀಯ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಶಸ್ತ್ರಚಿಕಿತ್ಸಕರು, ತಜ್ಞರು, ಆಸಕ್ತರು ಹಾಗೂ ಸಾರ್ವಜನಿಕರಿಂದ ತುಂಬಿತುಳಕತೊಡಗಿತ್ತು. ಪ್ರತಿಯೊಬ್ಬರಲ್ಲೂ ಲ್ಯಾಪ್ರೋಸ್ಕೋಪಿಕ್ ತಜ್ಞರ ಮಾತುಗಳನ್ನು ಕೇಳುವ ತವಕ.

### ಪೂಜೆಗಿಂತ ಪ್ರೇರಣೆಯ ಅಗತ್ಯ

ಇಂದು ನಮಗೆ ಬೇಕಾಗಿರುವುದು ಪೂಜೆಯೇ ಅಥವಾ ಪ್ರೇರಣೆಯನ್ನು ನೀಡುವ ಪ್ರಭಾವಶಾಲಿ ವ್ಯಕ್ತಿತ್ವವೇ ಎಂದು ಯೋಚಿಸುತ್ತಿದ್ದಾಗ ಮೂಲಭೂತ ಸತ್ಯವನ್ನು ನಾವು ಅರಿತುಕೊಂಡೆವು. ನಾವು ಮಹಾನ್ ಸಾಧಕರನ್ನು ಸಾಧನೆಗಾಗಿ ಅವರನ್ನು ದೇವರ ಎತ್ತರಕ್ಕೆ ಏರಿಸುತ್ತೇವೆ. ಇಂತಹ ಸಾಧನೆಗಳು ಪರಿಶ್ರಮದಿಂದ ಬಂದಿದ್ದರೂ ನಮ್ಮಲ್ಲಿರುವ ವ್ಯಕ್ತಿಯ ಆರಾಧನೆಯ ಗುಣವೂ ಆ ವ್ಯಕ್ತಿಗಳನ್ನು ದೈವತ್ವಕ್ಕೆ ಏರಿಸುತ್ತದೆ. ಸಾಮಾನ್ಯವಾಗಿ ನಾವು ಅವರನ್ನು ಅನುಸರಿಸುವುದರಿಂದ ತಪ್ಪಿಸಿಕೊಳ್ಳಲು ಅವರ ಕಠಿಣ ಪರಿಶ್ರಮವನ್ನು ಮರೆತು ಹೊಗಳುವ ಮಾರ್ಗವನ್ನು ಅನುಸರಿಸುತ್ತವೆ.

ದೇವರ ಆಶೀರ್ವಾದವನ್ನು ಬೇಡುವುದು ಸುಲಭ, ಆದರೆ ಪ್ರವರ್ತಕನ ಮಾರ್ಗವನ್ನು ಅನುಸರಿಸುವುದು ಕಷ್ಟ. ನನ್ನ ಪ್ರಕಾರ ಇಂದಿನ ಯುವಕರಿಗೆ ದೈವಿಕ ಆಚರಣೆಗಳು ಅಗತ್ಯವಿಲ್ಲ; ನಾವು ಸಾಗುವ ದಾರಿಯ ನೀಲಿನಕ್ಷೆಗಳು ಬೇಕು. ಪ್ರಗತಿಗೆ ಪೂಜಾ ದಿವಸದ ಅಗತ್ಯವಿಲ್ಲ, ಪ್ರೇರಣಾ ದಿವಸದ ಅಗತ್ಯವಿದೆ.

> **“ನಮ್ಮ ತಂದೆ, ತಾಯಿಗೆ ನಾವು ನಾಲ್ವರು ಮಕ್ಕಳು, ಬಾಲ್ಯದಿಂದಲೇ ಶಿಸ್ತು, ಸಮಯಪ್ರಜ್ಞೆ, ದೈವಭಕ್ತಿ ಮತ್ತು ಪರಿಶ್ರಮದಿಂದ ಕೆಲಸ ಮಾಡುವ ಗುಣಗಳನ್ನು ಪಡೆದುಕೊಂಡೆವು. ಇದಕ್ಕೆ ಮುಖ್ಯ ಪ್ರೇರಣೆ ನಮ್ಮ ತಂದೆ, ತಾಯಿಗಳೇ. ಅವರೆಂದೂ ನಮ್ಮನ್ನು ಕುಳ್ಳಿರಿಸಿಕೊಂಡು ಬೋಧನೆ ಮಾಡಿದವರಲ್ಲ. ತಮ್ಮ ನಡೆ, ನುಡಿಗಳಿಂದಲೇ ಅವರು ತಮ್ಮ ಮಕ್ಕಳು ಈ ಗುಣಗಳನ್ನು ಕಲಿಯುವಂತೆ ಮಾಡಿದ್ದಾರೆ. ವ್ಯಕ್ತಿ ತನ್ನ ಪರಿಶ್ರಮದ ಮೂಲಕ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದರೆ ಅವನಿಗೆ ಯಶಸ್ಸಿನ ಜೊತೆಗೆ ಸಾಮಾಜಿಕ ಮನ್ನಣೆಯೂ ದೊರೆಯುತ್ತದೆ ಎಂಬ ಭಾವನೆ ಅವರಲ್ಲಿದೆ.”**
>
> **ಡಾ. ರಮಣ್ ಎಂ. ಹುಲಿನಾಯ್ಕರ್**
> **ಸ್ವಾಗತ ಭಾಷಣದಿಂದ**

ಡಾ. ಎಂ.ಆರ್. ಹುಲಿನಾಯ್ಕರ್ ಮತ್ತು ಡಾ. ಸಿ. ಪಳನಿವೇಲು ಅವರಿಬ್ಬರೂ ‘ಕಾಯಕ ಯೋಗಿ’ಗಳು ಅವರು ದೈವದ ಆಶೀರ್ವಾದದಿಂದ ಹುಟ್ಟಿಲ್ಲ, ಅವರ ಅಪಾರ ಪರಿಶ್ರಮದಿಂದ ಹುಟ್ಟಿದ್ದಾರೆ. ಭಕ್ತಿಭಂಡಾರಿ ಬಸವಣ್ಣ, ಕಬೀರ್‌ದಾಸ್, ಮಹಾತ್ಮಗಾಂಧಿ, ಪೆರಿಯಾರ್ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಅವರಂತಹ ಮಹಾನ್ ಚೇತನಗಳ ಸ್ಫೂರ್ತಿ, ಸ್ವಪ್ರಯತ್ನ, ಅಧ್ಯಯನ ಮತ್ತು ಅನುಸರಣೆಯಿಂದ ಇವರಿಬ್ಬರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಮಾನ ರೀತಿಯ ಯಶಸ್ಸನ್ನು ಕಂಡಿದ್ದಾರೆ.

### ಸ್ಫೂರ್ತಿಯ ವಾಸ್ತುಶಿಲ್ಪ

ಮಾರ್ಚ್ 13ರಂದು ನಾವು ನಮ್ಮ ಶ್ರೀದೇವಿ ವಿದ್ಯಾಸಂಸ್ಥೆಯ ಆವರಣಕ್ಕೆ ಹೊಸ ಸ್ಫೂರ್ತಿಯ ಮೂಲವನ್ನು ತಂದಿದ್ದೆವು. ಡಾ. ಸಿ. ಪಳನಿವೇಲು. ಅವರ ಭಾಷಣವು ಶಸ್ತ್ರಚಿಕಿತ್ಸಾಕ್ಷೇತ್ರ ಮತ್ತು ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣದ ದೃಷ್ಟಿಯಿಂದ ಒಂದು ಮಾಸ್ಟರ್‌ಕ್ಲಾಸ್ ಭಾಷಣವಾಗಿತ್ತು.

ಅವರು ಶಸ್ತ್ರಚಿಕಿತ್ಸಕನಲ್ಲಿರಬೇಕಾದ ಮಾನವೀಯತೆ ಮತ್ತು ವೈಜ್ಞಾನಿಕ ಮನೋಭಾವವನ್ನು ಕುರಿತು ಮಾತನಾಡಿದರು. “ಸಹೋದ್ಯೋಗಿ ಮಿತ್ರರೇ, ತಂತ್ರಜ್ಞಾನವು ಕೇವಲ ಒಂದು ಸಾಧನ, ಆದರೆ ಹೃದಯವು ನಿಜವಾದ ಸಾಧನ. ನಾನು ವಿನಮ್ರನಾಗಿ ಹಳ್ಳಿಯಿಂದ ಜಾಗತಿಕ ಉತ್ತುಂಗಕ್ಕೆ ವೈದ್ಯಕೀಯ ಲೋಕದ ಮೂಲಕ ಪ್ರಯಾಣ ಮಾಡಿದೆ. ನನ್ನ ಶ್ರೇಯಸ್ಸಿಗೆ ಮಾನವನ ಇಚ್ಛೆಯ ಜೊತೆಗೆ ದೇವರು ನಿಗದಿಪಡಿಸಿದ ಅದೃಷ್ಟವು ಸಹ ಅಗತ್ಯವಾಗಿತ್ತು ಎನ್ನುವುದನ್ನು ಮರೆಯುವಂತಿಲ್ಲ.”

### ಕೌಶಲ ಮತ್ತು ಸಮಯ ಯಶಸ್ಸಿನ ಮೆಟ್ಟಲುಗಳು

ದಿನದ ಪ್ರಮುಖ ಅಂಶವೆಂದರೆ ನಿಸ್ಸಂದೇಹವಾಗಿ ಡಾ. ಪಳನಿವೇಲು ಭಾಷಣ. ಅವರ ಮಾತುಗಳು ಯುವ ವೈದ್ಯಕೀಯ ಆಕಾಂಕ್ಷಿಗಳಿಗೆ ಒಂದು ಸ್ಪಷ್ಟ ಕರೆಯಾಗಿತ್ತು. ಭಾರತವು ಪ್ರತಿಭೆಯ ಜಲಾಶಯವಾಗಿದೆ. ಆದರೆ ಈಗ ಪ್ರತಿಭೆ ಮಾತ್ರ ಸಾಕಾಗುವುದಿಲ್ಲ ಎನ್ನುವುದನ್ನು ಅವರು ನೆನಪಿಸಿದರು.

‘ಭಾರತವು ತನ್ನ ಜನರು ತಮ್ಮ ಕೌಶಲ ಮತ್ತು ಸಮಯವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರೆ ಜಗತ್ತಿನಲ್ಲಿ ಪ್ರಮುಖ ರಾಷ್ಟ್ರವಾಗಿ ಹೊರಹೊಮ್ಮುವ ಸಾಮರ್ಥ್ಯವನ್ನು ಹೊಂದಿದೆ’ ಎನ್ನುವುದು ಡಾ. ಪಳನಿವೇಲು ಸ್ಪಷ್ಟ ಅಭಿಪ್ರಾಯವಾಗಿತ್ತು.

ಸಭಾಂಗಣದಲ್ಲಿರುವ ಎಲ್ಲಾ ವಿದ್ಯಾರ್ಥಿಗಳ ಹೃದಯಕ್ಕೂ ಅವರ ಸಂದೇಶ ಸ್ಪಷ್ಟವಾಗಿ ಮುಟ್ಟಿತು. ವ್ಯಕ್ತಿಯಲ್ಲಿ ಕೌಶಲವಿದ್ದರೆ ಅವರ ಪಾಂಡಿತ್ಯಕ್ಕೆ ಬೆಲೆ. ರೊಬೊಟಿಕ್ ಮತ್ತು ಲ್ಯಾಪರೊಸ್ಕೋಪಿಕ್ ಯುಗದಲ್ಲಿ ಯುವಜನಾಂಗ ಪ್ರಮಾಣೀಕರಣಗಳನ್ನು ಮೀರಿ ಬೆಳೆಯಬೇಕು. ತಾಂತ್ರಿಕ ನಿಕರತೆ ಪಡೆಯಲು ಜೀವನಪರ್ಯಂತ ಕಲಿಕೆಗಾಗಿ ಶ್ರಮಿಸಬೇಕು. ಸುಧಾರಿತ ಆರೋಗ್ಯ ಸೇವೆಯನ್ನು ಕೇವಲ ಕೆಲವರಿಗೆ ಮಾತ್ರ ಮೀಸಲಾಗಿರಿಸದೆ, ಈ ಸೇವೆ ಜನಸಾಮಾನ್ಯರ ಹಕ್ಕು ಆಗುವಂತೆ ಮಾಡುವುದು ನಮ್ಮ ಮುಂದಿರುವ ಸವಾಲು.

ಡಾ. ಪಳನಿವೇಲು ಏಕಕಾಲದಲ್ಲಿ ಲ್ಯಾಪ್ರೊಸ್ಕೋಪಿಕ್ ಮತ್ತು ರೊಬೋಟಿಕ್ ಸರ್ಜನ್ ಆಗಿರುವಂತೆ ಕ್ರಾಂತಿಕಾರಿ ಸಮಾಜ ಸುಧಾರಕನಾಗಿರುವುದನ್ನೂ ಗಮನಿಸಬಹುದು. ಇಂತಹ ಗುಣಗುಳ್ಳ ವೈದ್ಯರು ನಮ್ಮಲ್ಲಿ ತುಂಬಾ ಅಪರೂಪ. ಇದಕ್ಕೆ ಕಾರಣ ಅವರ ಜೀವನ ಎನ್ನಬಹುದು. ಈ ಜೀವನದಿಂದಾಗಿ ಅವರಲ್ಲಿ ಸುಧಾರಕನ ವ್ಯಕ್ತಿತ್ವ ನಿಚ್ಚಳವಾಗಿ ಗೋಚರವಾಗುತ್ತದೆ. ಪ್ರೀತಿ, ಕರುಣೆ ಮತ್ತು ಜನಸಾಮಾನ್ಯರಲ್ಲಿ ಅಗಾಧವಾದ ಕಾಳಜಿ ಡಾ. ಸಿ. ಪಳನಿವೇಲು ಅವರ ವ್ಯಕ್ತಿತ್ವದ ಗುಣಗಳಾಗಿವೆ. ಇದರಿಂದಾಗಿಯೇ ಅವರು ಈ ಸಾಲಿನ ‘ಡಾ. ಎಂ.ಆರ್. ಹುಲಿನಾಯ್ಕರ್ ಹಾಗೂ ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಅವರ ಹೆಸರಿನ ಶ್ರೇಷ್ಠ ವೈದ್ಯರಿಗೆ ಅವರ ಜೀವಮಾನ ಸಾಧನೆಗೆ ಪ್ರಶಸ್ತಿ’ಗೆ ಪಾತ್ರರಾಗಿದ್ದಾರೆ. ಅವರಿಗೆ ಮತ್ತೊಮ್ಮೆ ಹಾರ್ದಿಕ ಅಭಿನಂದನೆಗಳು.

# ಡಾ. ಪಳನಿವೇಲು ಅವರಿಗೆ ಜೀವಮಾನ ಸಾಧನಾ ಪುರಸ್ಕಾರ



ವೈದ್ಯಕೀಯ ಕ್ಷೇತ್ರದಲ್ಲಿ ಅಸಾಧಾರಣಾ ಸಾಧನೆಗೈದ ವಿಶ್ವ ಪ್ರಸಿದ್ಧ ಲ್ಯಾಪ್ರೋಸ್ಕೋಪಿಕ್ ಮತ್ತು ರೋಬೋಟಿಕ್ ಶಸ್ತ್ರಚಿಕಿತ್ಸಾತಜ್ಞ ಡಾ. ಸಿ. ಪಳನಿವೇಲು ಅವರಿಗೆ ಮಾರ್ಚ್ 13 ರಂದು (ಶುಕ್ರವಾರ) ಡಾ. ಎಂ.ಆರ್. ಹುಲಿನಾಯ್ಕರ್ ಮತ್ತು ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಜೀವಮಾನ ಸಾಧನಾ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ನಿರ್ದೇಶಕ ಡಾ.ರಮಣ್ ಎಂ. ಹುಲಿನಾಯ್ಕರ್ ಹೇಳಿದ್ದಾರೆ.

ಮಾರ್ಚ್ 11ರಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, “ತಮಿಳುನಾಡಿನ ಬಡರೈತನ ಮಗನಾಗಿ ಜನಿಸಿದ ಡಾ. ಪಳನಿವೇಲು ಕೊಯಮತ್ತೂರಿನ ಜಿಇಎಂ ಆಸ್ಪತ್ರೆಯ ಸಂಸ್ಥಾಪಕರಾಗಿ, ವಿಶ್ವದ ಎಲ್ಲ ಕಡೆ ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸೆ ಬಳಕೆಗೆ ಮೂಲ ಕಾರಣಕರ್ತರಾಗಿದ್ದಾರೆ. ಇಂಗ್ಲೆಂಡಿನ ಪ್ರತಿಷ್ಠಿತ ರಾಯಲ್ ಕಾಲೇಜಿನ ಫೆಲೋಷಿಪ್ ಪಡೆದಿದ್ದಾರೆ. ವೈದ್ಯಕೀಯ ಕ್ಷೇತ್ರದ ಅಪ್ರತಿಮ ಸಾಧನೆಗಾಗಿ ಕೇಂದ್ರ ಸರ್ಕಾರ ಕೊಡ ಮಾಡುವ ಪ್ರತಿಷ್ಠಿತ ಡಾ.ಬಿ. ಸಿ. ರಾಯ್ ರಾಷ್ಟ್ರೀಯ ಪುರಸ್ಕಾರಕ್ಕೆ ಎರಡು ಭಾರಿ ಭಾಜನರಾಗಿದ್ದಾರೆ.

ಲ್ಯಾಪ್ರೋಸ್ಕೋಪಿಕ್ ಕುರಿತಂತೆ ಹಲವು ಮಹತ್ವದ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುವಂತಹ ಅನೇಕ ವೈದ್ಯಕೀಯ ಕೃತಿಗಳನ್ನು ಹೊರತಂದಿದ್ದು, ಹಲವು ತಾಂತ್ರಿಕ ಆವಿಷ್ಕಾರಗಳಿಗೂ ಕಾರಣರಾಗಿದ್ದಾರೆ. ಹೀಗಾಗಿ ಅವರ ಸಾಧನೆಯನ್ನು ಗುರುತಿಸಿ ಪುರಸ್ಕಾರ ನೀಡಲಾಗುತ್ತಿದೆ. ಈ ಪ್ರಶಸ್ತಿಯ ಮೊತ್ತ ಒಂದೂವರೆ ಲಕ್ಷ ರೂಪಾಯಿ ಹಾಗೂ ಬಿನ್ನವತ್ತಳೆ ಒಳಗೊಂಡಿರುತ್ತದೆ ಎಂದು ಹೇಳಿದರು.

ಸುವರ್ಣಮುಖಿ ಸಂಸ್ಕೃತಿಧಾಮದ ಸಂಸ್ಥಾಪಕರಾದ ಡಾ. ಆಚಾರ್ಯ ಎಂ. ನಾಗರಾಜ್ ಹಾಗೂ ನವದೆಹಲಿಯ ರಾಷ್ಟ್ರೀಯ ಸ್ವಾಭಿಮಾನ ಪರಿಷತ್ ಅಧ್ಯಕ್ಷ ಬಸವರಾಜ ಪಾಟೀಲ್ ಹಾಗೂ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆ ನಿರ್ದೇಶಕ ಡಾ. ಈಶ್ವರ್ ಆರ್. ಹೊಸಮನಿ ಮೊದಲಾದವರು ಸಾಕ್ಷಿಯಾಗಲಿದ್ದಾರೆ ಎಂದು ಅವರು ತಿಳಿಸಿದರು.

ಶಿಕ್ಷಣತಜ್ಞ, ಮಾನವಪ್ರೇಮಿ ಮತ್ತು ಪ್ರಗತಿಪರ ಚಿಂತಕ ಹಾಗೂ ಖ್ಯಾತ ಸರ್ಜನ್ ಡಾ. ಎಂ.ಆರ್. ಹುಲಿನಾಯ್ಕರ್ ಜನ್ಮದಿನವಾದ ಜನವರಿ 16ರಂದು ಪ್ರತಿವರ್ಷ “ಪ್ರೇರಣಾ ದಿನ” ವನ್ನಾಗಿ ಆಚರಿಸಲಾಗುತ್ತದೆ ಎಂದು ಅವರು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್, ನೇತ್ರತಜ್ಞೆ ಡಾ. ಲಾವಣ್ಯ ಮತ್ತು ಪ್ರಾಂಶುಪಾಲ ಡಾ. ನರೇಂದ್ರ ವಿಶ್ವನಾಥ್ ಹಾಜರಿದ್ದರು.

■ ವರದಿ: ಎನ್. ಆನಂದ

# ಕರಡಿ ದಾಳಿಗೊಳಗಾದ ರೈತನಿಗೆ ಪ್ಲಾಸ್ಟಿಕ್ ಸರ್ಜರಿ ಮೂಲಕ ಮರುಜನ್ಮ

ಹುಟ್ಟಿನಿಂದ ಬಂದ ಮನುಷ್ಯನ ಅಂದಕ್ಕೆ ನಾನಾ ಕಾರಣಗಳಿಂದಾಗಿ ವಿರೂಪ ಉಂಟಾಗಬಹುದು. ಅಪಘಾತ, ಬೆಂಕಿ ಅವಘಡ, ಪ್ರಾಣಿಗಳ ದಾಳಿ, ಗ್ಯಾಂಗ್ರೀನ್ ಹೀಗೆ ಹಲವು ಸಂದರ್ಭಗಳಲ್ಲಿ ಮನುಷ್ಯನ ಅಂಗಾಂಗಗಳ ಮೂಲ ಸೌಂದರ್ಯಕ್ಕೆ ಭಂಗವುಂಟಾಗುವ ಸಾಧ್ಯತೆಯಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಅಂದವನ್ನು ಮರುಸ್ಥಾಪಿಸಲು ಪ್ಲಾಸ್ಟಿಕ್ ಸರ್ಜರಿ ನೆರವಿಗೆ ಬರುತ್ತದೆ. ಆದರೆ, ಈ ಪ್ಲಾಸ್ಟಿಕ್ ಸರ್ಜರಿ ಯಶಸ್ವಿಯಾಗಬೇಕಾದರೆ ಅದನ್ನು ನಿರ್ವಹಿಸಲು ಸುಸಜ್ಜಿತ ಮೂಲ ಸೌಕರ್ಯದ ಜೊತೆಗೆ ತಜ್ಞರಿಗೆ ಹೆಚ್ಚಿನ ಮಟ್ಟದ ಕೌಶಲ ಅತ್ಯಗತ್ಯ. ಇಂತಹ ಗುಣಮಟ್ಟದ ಚಿಕಿತ್ಸೆಗೆ ಕೆಲವು ವರ್ಷಗಳ ಹಿಂದೆ ಈ ಭಾಗದ ಜನರು ಬೆಂಗಳೂರಿನಂತಹ ದೊಡ್ಡ ನಗರಗಳನ್ನೇ ಅವಲಂಬಿಸಬೇಕಾಗುತ್ತಿತ್ತು. ಆದರೆ, ಇದೀಗ ತುಮಕೂರಿನ ಶ್ರೀದೇವಿ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿಯೇ ಅಂತಹ ಚಿಕಿತ್ಸೆಯು ಲಭ್ಯವಿದೆ. ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ ರೈತನಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಿ ಸುರೂಪವನ್ನು ನೀಡಿದವರು ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಪ್ಲಾಸ್ಟಿಕ್ ಸರ್ಜನ್ ಡಾ. ವಿನೋದ್. ಆ ಶಸ್ತ್ರ ಚಿಕಿತ್ಸೆಯ ವಿವರಗಳು ಹೀಗಿವೆ.



ತುಮಕೂರು ಜಿಲ್ಲೆ ಮಧುಗಿರಿ ತಾಲೂಕಿನ ನೀಲಹಳ್ಳಿ ಗ್ರಾಮದ ಹನುಮಂತಪ್ಪ (50) ಅವರು ತಮ್ಮ ಹೊಲದಲ್ಲಿ ಕೆಲಸ ಮಾಡುವಾಗ ಕರಡಿ ದಾಳಿಮಾಡಿ ಮುಖವನ್ನು ಕಚ್ಚಿ, ಪರಚಿ ಹಾಕಿತ್ತು. ಆದರೂ ಹೇಗೋ ಸಾಹಸ ಮಾಡಿ ಕರಡಿಯನ್ನು ಕಾಲಿನಿಂದ ಒದ್ದು, ಸುಮಾರು ಒಂದು ಕಿಲೋಮೀಟರ್‌ವರೆಗೆ ಅವರೇ ನಡೆದುಕೊಂಡು ಬಂದು, ಅನಂತರ ಬೇರೆಯವರ ಸಹಾಯದಿಂದ ತುಮಕೂರಿನ ಶ್ರೀದೇವಿ ಆಸ್ಪತ್ರೆಗೆ ಬಂದರು. ಅವರು ಬಂದಾಗ ಮುಖ ಬಹಳ ವಿಕಾರವಾಗಿತ್ತು, ಉಸಿರಾಟಕ್ಕೂ ಬಹಳ ಕಷ್ಟವಾಗುತ್ತಿತ್ತು. ಸಾವು–ಬದುಕಿನ ನಡುವಿನ ಹೋರಾಟದ ಸ್ಥಿತಿ ಉಂಟಾಗಿತ್ತು. ಮೂಗಿನ ಮೂಳೆ ಪ್ರತ್ಯೇಕವಾಗಿತ್ತು. ಅದು ಎಲ್ಲಿದೆ ಎಂಬುದೇ ಗೊತ್ತಾಗದಷ್ಟರ ಮಟ್ಟಿಗೆ ಒಂದು ಪಕ್ಕಕ್ಕೆ ಜಾರಿಹೋಗಿತ್ತು. ಮುಖ ಬಹಳ ವಿಕಾರವಾಗಿತ್ತು. ಅದನ್ನು ಸ್ವಚ್ಛ ಮಾಡಿ ಅವರಿಗೆ ರಕ್ತ ಕೊಟ್ಟು ಉಸಿರಾಟ ಸಹಜವಾಗುವವರೆಗೆ ಕೃತಕ ನಳಿಕೆಯನ್ನು ಹಾಕಿ ಅನಂತರ ಮೂಗಿನ ಮೂಳೆಯನ್ನು ಅದರ ಮೂಲ ಜಾಗದಲ್ಲಿ ಶಸ್ತ್ರಚಿಕಿತ್ಸೆಯ ಮೂಲಕ ಕೂರಿಸಿದ ಮೇಲೆ ಉಸಿರಾಟ ಸಹಜವಾಯಿತು.

ಯಾವುದೇ ಕಾಡುಪ್ರಾಣಿ ದಾಳಿ ಮಾಡಿದಾಗ ಗಾಯಗಳಲ್ಲಿ ಮಣ್ಣು ಇತರೆ ಕಸ ಸೇರಿಕೊಂಡು ಸೋಂಕು ತಗಲುವ ಸಾಧ್ಯತೆ ಬಹಳ ಹೆಚ್ಚಾಗಿರುತ್ತದೆ. ಹೀಗಾಗಿ ಮೊದಲು ಗಾಯವನ್ನು ಚೆನ್ನಾಗಿ ತೊಳೆದು ಅವರ ಮುಖದಲ್ಲಿ ರಕ್ತದೊಂದಿಗೆ ಬೆರೆತುಹೋಗಿದ್ದ ಮಣ್ಣಿನ ಅಂಶಗಳನ್ನು ತೆಗೆದುಹಾಕಿ ಅನಂತರ ಮೂಗಿನ ಮೂಳೆಯನ್ನು ಕೂರಿಸಿದರು. ಮೃತ ಟಿಶ್ಯೂಗಳನ್ನು ಹೊರತೆಗೆದು ಮೂಳೆ ಮತ್ತು ಚರ್ಮಕ್ಕೆ ಹೊಲಿಗೆ ಹಾಕಿ ಮುಖ ಮೊದಲಿನ ಸ್ವರೂಪಕ್ಕೆ ಬರುವ ಹಾಗೆ ಮಾಡಿ ಕತ್ತರಿಸಿಹೋಗಿದ್ದ ನರಗಳನ್ನು ಮರುಜೋಡಣೆ ಮಾಡಿದರು.

ಉಸಿರಾಟ ಸಹಜವಾದ ಬಳಿಕ ತುರ್ತು ನಿಗಾ ಘಟಕದಿಂದ ಅವರನ್ನು ವಾರ್ಡಿಗೆ ಸ್ಥಳಾಂತರಗೊಂಡ ಅವರು ತದನಂತರ ಆಸ್ಪತ್ರೆಯಲ್ಲಿ ಕೇವಲ ಒಂದು ವಾರ ಮಾತ್ರ ಚಿಕಿತ್ಸೆಯನ್ನು ಪಡೆದು ಈಗ ಮನೆಗೆ ಹಿಂತಿರುದ್ದಾರೆ. ಎರಡನೇ ವಾರದಲ್ಲಿ ಅವರಿಗೆ ಹಾಕಿದ್ದ ಹೊಲಿಗೆಗಳನ್ನು ತೆಗೆದುಹಾಕಲಾಯಿತು. ಉಸಿರಾಟಕ್ಕೆ ಬಾಯಿ ತೆಗೆಯಲು ಕೂಡ ಯಾವುದೇ ಸಮಸ್ಯೆ ಆಗಲಿಲ್ಲ. ಹೀಗಾಗಿ ಕೇವಲ ಒಂದೇ ತಿಂಗಳ ಅವಧಿಯಲ್ಲಿ ಅವರು ಮೊದಲಿನಂತೆ ಆಗಿದ್ದಾರೆ ಎಂದು ಡಾ. ವಿನೋದ್ ಅವರು ತಮ್ಮ ಅನಿಸಿಕೆಗಳನ್ನು ಪತ್ರಿಕೆಯೊಂದಿಗೆ ಹಂಚಿಕೊಂಡರು.

---

# ಮಧ್ಯಪ್ರಾಚ್ಯದಲ್ಲಿನ ಯುದ್ಧ: ಹಲವು ವಿಷಯಗಳಲ್ಲಿ ಗೊಂದಲ

▸▸ 2ನೇ ಪುಟದಿಂದ

ವಿಜಯದ ಬೆಲೆ ನಾವು ಕಳೆದುಕೊಂಡ ಮೌಲ್ಯಗಳ ಸಮೀಪಕ್ಕೂ ಬಾರದು ಎಂಬುದನ್ನು ನಾವು ಗಮನಿಸಬೇಕು.

ದೇಶಗಳನ್ನು ಶಾಂತಿಯತ್ತ ನಡೆಸಿಕೊಂಡು ಹೋಗಬಲ್ಲ ವಿವೇಕಿಗಳಿಗೆ ಈ ಪ್ರಪಂಚದಲ್ಲಿ ಬರವಿಲ್ಲ. ಆದರೂ ಅವರ ಮುತ್ಸದ್ದಿತನವು ರಾಜಕೀಯ ಆಡಳಿತಗಾರರ ಸೈದ್ಧಾಂತಿಕತೆ, ಹಠ ಸಾಧನೆಯ ಹುಚ್ಚು, ಆತ್ಮಪ್ರತಿಷ್ಠೆಗಳ ಮುಂದೆ ಮಂಕಾಗುತ್ತದೆ.

ಇಂದಿನ ಜನತೆ ಆಶಿಸುವುದು ತಮ್ಮ ಮುಖಂಡರಲ್ಲಿ ನೈತಿಕಸ್ಥೈರ್ಯವನ್ನು ತುಂಬಿ ಇಡೀ ದೇಶವನ್ನು ಶಾಂತಿ, ಸುವ್ಯವಸ್ಥೆಯ ಕಡೆಗೆ ಒಯ್ಯಬಲ್ಲಂತಹ ಮಹಾತ್ಮಗಾಂಧಿ, ಗೌತಮ ಬುದ್ಧರಂತಹ ಮಾನವರತ್ನಗಳ ಆಗಮನವನ್ನು. ಅಂತಹ ಮಹಾತ್ಮರಲ್ಲಿದ್ದ ಉತ್ತಮೋತ್ತಮ ಗುಣಗಳನ್ನು, ಸ್ಥೈರ್ಯವನ್ನು, ನಮ್ಮ ವ್ಯವಸ್ಥೆಗೆ ಕಸಿಮಾಡುವುದು, ಮಾನವೀಯ ಮೌಲ್ಯಗಳಿಗೆ ನಮ್ಮ ಸಾಮಾಜಿಕ, ರಾಜಕೀಯ ಜೀವನದಲ್ಲಿ ಯೋಗ್ಯಸ್ಥಾನವನ್ನು ಕಲ್ಪಿಸುವುದು ನಮ್ಮ ಮುಂದೆ ಇಂದು ಇರುವ ದೊಡ್ಡ ಸವಾಲಾಗಿದೆ.

**ಅಂತಾರಾಷ್ಟ್ರೀಯ ಸಂಸ್ಥೆಗಳ ಪಾತ್ರ:**

ಎರಡು ಮಹಾಯುದ್ಧಗಳ ಹಾನಿಯನ್ನು ಕಂಡ ಜಗತ್ತು ಮುಂದೆ ಇಂತಹ ವಿಪತ್ತುಗಳು ಮಾನವ ಜನಾಂಗದ ಮೇಲೆ ಎರಗಬಾರದೆಂಬ ಉದ್ದೇಶದಿಂದ ಹಲವಾರು ಸಂಸ್ಥೆಗಳನ್ನು ಹುಟ್ಟುಹಾಕಿತು. ಇವುಗಳ ಉದ್ದೇಶ ಎಲ್ಲ ಬಗೆಯ ಅಂತಾರಾಷ್ಟ್ರೀಯ ತಕರಾರುಗಳನ್ನೂ ಮಾತುಕತೆಗಳ ಮೂಲಕ, ಪಂಚಾಯತಿಯ ಮೂಲಕ ಬಗೆಹರಿಸಿಕೊಳ್ಳುವುದಾಗಿತ್ತು.

ಆದರೆ ಇಂತಹ ಉದ್ದೇಶಗಳು ನೆರವೇರುವುದು, ಸಶಕ್ತ ದೇಶಗಳ ರಾಜಕೀಯ ಒಲವುಗಳನ್ನು ಅವಲಂಬಿಸಿರುತ್ತದೆ. ಅಂತಾರಾಷ್ಟ್ರೀಯ ರಾಜಕೀಯ ದ್ವೇಷಗಳು, ಮೇಲಾಟಗಳೇ ಮೇಲುಗೈಯನ್ನು ಸಾಧಿಸಿದಾಗ ಈ ಪ್ರಯತ್ನಗಳಿಗೆ ಯಾವ ಬೆಲೆಯೂ ಇರದು ಮತ್ತು ಪರಿಹಾರ ಅಸಾಧ್ಯ. ಹೀಗಾಗದಿರುವಂತೆ ಮಾಡಲು ಎಲ್ಲ ದೇಶಗಳ ನಡುವೆ ಸಹಕಾರ, ಪರಸ್ಪರ ಅರಿವು ಅಗತ್ಯ.

**ನಮ್ಮ ಆಯ್ಕೆ ಯುದ್ಧವಲ್ಲ, ವಿವೇಕ:**

ಈಗ ನಡೆಯುತ್ತಿರುವ ಯುದ್ಧವು ತನ್ನ ದುಷ್ಪರಿಣಾಮಗಳನ್ನು ನಮ್ಮ ಕಣ್ಣುಗಳ ಮುಂದೆ ನಿಚ್ಚಳವಾಗಿ ಕಾಣುವಂತೆ ತೆರೆದಿಟ್ಟಿದೆ.

ರಕ್ಷಣೆ, ರಾಷ್ಟ್ರೀಯ ಹೆಮ್ಮೆ ಮತ್ತು ಅಭಿಮಾನಗಳ ಹೆಸರಿನಲ್ಲಿ ಯುದ್ಧಗಳನ್ನು ಸಾರಬಹುದು, ಆದರೆ, ಯುದ್ಧದ ಪರಿಣಾಮವಾಗಿ ಕಸದ ರಾಶಿಯಾದ ನಗರಗಳು, ಹಾಳಾದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ, ಜನತೆಯ ಮೇಲೆ ಆಗಿರುವ ಅಳಿಸಲಾಗದ ಗಾಯಗಳು, ಬೇರೆಯದೇ ಕಥೆಯನ್ನು ನಮಗೆ ಹೇಳುತ್ತವೆ.

ಮಾನವಜನಾಂಗವು ವಿಜ್ಞಾನ, ತಂತ್ರಜ್ಞಾನ ಮತ್ತು ಇತರ ಕ್ಷೇತ್ರಗಳಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಿದೆ. ಆದರೆ ಮತ್ತೆ ಮತ್ತೆ ಸಂಭವಿಸುವ ಯುದ್ಧಗಳು ನಮ್ಮ ಮನಸ್ಸನ್ನು ಕೊರೆಯುವ ಪ್ರಶ್ನೆಯೊಂದನ್ನು ಕೇಳುವಂತೆ ಮಾಡುತ್ತದೆ: ಈ ಪ್ರಗತಿಗಾಗಿ ನಮ್ಮ ವಿವೇಕವನ್ನು ಬಲಿಕೊಡುತ್ತಿದ್ದೇವೆಯೇ?

ಮಾನವಜನಾಂಗದ ಭವಿಷ್ಯವು ಇಂದಿನವರು ಇತಿಹಾಸದಿಂದ ಏನನ್ನು ಕಲಿಯುತ್ತಾರೆ ಎಂಬುದನ್ನು ಅವಲಂಬಿಸಿರುತ್ತದೆ. ಮಾತುಕತೆ, ಮುತ್ಸದ್ದಿತನ, ಪರಸ್ಪರರ ನಡುವಿನ ತಿಳಿವಳಿಕೆ ಇವು ನಮ್ಮ ದೌರ್ಬಲ್ಯಗಳಲ್ಲ. ಅವುಗಳಿಂದಲೇ ನಾವು ಚಿರಕಾಲ ನೆಲಸುವಂತಹ ಶಾಂತಿಯನ್ನು ಸಾಧಿಸಲು ಸಾಧ್ಯ. ಒಣ ಹೆಮ್ಮೆಯ ಮೇಲೆ ವಿವೇಕ, ಮತ್ತು ಯುದ್ಧದ ಮೇಲೆ ಸಹಕಾರಗಳು ವಿಜಯವನ್ನು ಸಾಧಿಸಿದಾಗಲಷ್ಟೇ ಈ ವಿನಾಶಕಾರಿ ಸನ್ನಿವೇಶಗಳನ್ನು ಮೀರಿ ರಾಷ್ಟ್ರಗಳು ಮುನ್ನಡೆಯಬಹುದು.

**ಭಾರತದ ನಿಲವು:**

ಇಸ್ರೇಲ್, ಅಮೆರಿಕಾ ಒಂದು ಪಕ್ಷವಾಗಿಯೂ, ಇರಾನ್ ಮತ್ತೊಂದು ಪಕ್ಷವಾಗಿಯೂ ಇರುವ ಮಧ್ಯಪ್ರಾಚ್ಯ ಯುದ್ಧದ ವಿಷಯದಲ್ಲಿ ಭಾರತವು ಬಹು ಎಚ್ಚರಿಕೆಯ ಹೆಜ್ಜೆಯನ್ನು ಇರಿಸುತ್ತಿದೆ. ತಾನು ಆಡುವ ಒಂದೊಂದು ಮಾತನ್ನೂ, ತೆಗೆದುಕೊಳ್ಳುವ ಕ್ರಮವನ್ನೂ ಅಳೆದು ತೂಗುತ್ತಿದೆ. ಭಾರತದ ಈ ನಡೆಯ ಹಿಂದೆ ಅತ್ಯುತ್ತಮವಾದ ರಾಜತಾಂತ್ರಿಕ ನಿಲುವು, ಯುದ್ಧದಲ್ಲಿ ನಿರತವಾಗಿರುವ ರಾಷ್ಟ್ರಗಳಲ್ಲಿ ಯಾವುದನ್ನೂ ಎದಿರು ಹಾಕಿಕೊಳ್ಳದೆ ತನ್ನ 140 ಕೋಟಿ ಜನರ ಹಿತರಕ್ಷಣೆಯನ್ನೇ ಮನಸ್ಸಿನಲ್ಲಿಟ್ಟುಕೊಂಡಿರುವುದು ಮೆಚ್ಚುಗೆಗೆ ಪಾತ್ರವಾಗಿದೆ. ಇಷ್ಟರ ನಡುವೆಯೂ, ಯುದ್ಧವನ್ನು ಆದಷ್ಟು ಬೇಗ ಕೊನೆಗಾಣಿಸಬೇಕೆಂಬ ಆಶಯದಿಂದ ಪ್ರಮುಖ ರಾಷ್ಟ್ರಗಳ ನಾಯಕರೊಂದಿಗೆ ಮಾತುಕತೆಯನ್ನು ನಡೆಸುತ್ತಿದೆ.

ಇದಕ್ಕೆ ಕಾರಣ, ಭಾರತವು ಇಸ್ರೇಲ್ ದೇಶದೊಂದಿಗೆ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಹೊಂದಿರುವ ಒಡಂಬಡಿಕೆಗಳಿಗೆ ಯಾವುದೇ ತೊಂದರೆಯಾಗಬಾರದು, ಮತ್ತು ಇರಾನಿನಿಂದ ನಮಗೆ ಬರುತ್ತಿರುವ ತೈಲ ಮತ್ತು ಅನಿಲಗಳ ಸರಬರಾಜಿಗೆ ಧಕ್ಕೆಯಾಗಬಾರದು ಎಂಬ ರಕ್ಷಣಾತ್ಮಕದೃಷ್ಟಿ. ಯಾವ ದೇಶದ ನಿಲವನ್ನೂ ಮತ್ತು ಕ್ರಮಗಳನ್ನೂ ಟೀಕಿಸದೆ ಅವುಗಳೊಡನೆ ತನ್ನ ಸಂಬಂಧವನ್ನು ಕೆಡಿಸಿಕೊಳ್ಳದೆ ಭಾರತವು ಮುಂದುವರಿಯುತ್ತಿದೆ. ಹೊರನೋಟಕ್ಕೆ ಇದು ಕೇವಲ ನಮ್ಮ ದೇಶದ ಹಿತಾಸಕ್ತಿಯನ್ನು ಕಾಪಾಡಲು ಎಂಬಂತೆ ತೋರಿದರೂ, ಇದರ ಹಿಂದಿರುವ ರಾಜತಾಂತ್ರಿಕ ಜಾಣ್ಮೆ ವಿಶ್ವ ರಾಜಕೀಯದಲ್ಲಿ ಅತ್ಯುತ್ತಮವಾದುದಾಗಿದೆ.

ಆದರೆ, ಈ ನಿಲುವು, ರಾಜತಾಂತ್ರಿಕದೃಷ್ಟಿ, ಅತಿಯಾದ ಎಚ್ಚರಿಕೆ – ಇವು ದೇಶದ ಒಳಗೆ ಕೆಲವು ರಾಜಕಾರಣಿಗಳಿಂದ ಟೀಕೆಗೆ ಒಳಗಾಗಿರುವುದು ದಿಟ. ಅವರ ಪ್ರಕಾರ ಭಾರತವು ಪರಂಪರಾಗತವಾಗಿ ಬಂದಿರುವ ತನ್ನ ನೈತಿಕ ನಿಲವನ್ನು ತ್ಯಾಗ ಮಾಡಿದೆ, ಮೊದಲಿನಿಂದಲೂ ಪ್ಯಾಲೆಸ್ಟೈನ್‌ಗೆ ನೀಡುತ್ತಿದ್ದ ಬೆಂಬಲಕ್ಕೆ ತಿಲಾಂಜಲಿಯನ್ನು ಇತ್ತಿದೆ. ಇದರಿಂದ ನಮಗೆ ಬರುತ್ತಿದ್ದ ತೈಲ ಮತ್ತು ಅನಿಲ ಸರಬರಾಜಿಗೆ ತೊಂದರೆಯಾಗಿ ನಮ್ಮ ಆರ್ಥಿಕತೆಗೆ ಬಹುದೊಡ್ಡ ಹೊಡೆತ ಬೀಳುತ್ತದೆ. ಈ ದೃಷ್ಟಿಕೋನದಿಂದ ನೋಡಿದಾಗ ಇದು ಸತ್ಯವೆಂದು ಕಂಡುಬಂದರೂ, ಸದ್ಯ ವಿಶ್ವದಲ್ಲಿರುವ ಅಂತಾರಾಷ್ಟ್ರೀಯ ಸಂಬಂಧ, ತಿಕ್ಕಾಟ, ಭಾರತದ ಗಡಿ ಹಾಗೂ ವ್ಯಾಪಾರ ವ್ಯವಹಾರಗಳು ಮತ್ತು ತಂತ್ರಜ್ಞಾನದ ದೃಷ್ಟಿಯಿಂದ ನೋಡಿದಾಗ ಭಾರತವು ಸರಿಯಾದ ದಿಕ್ಕಿನಲ್ಲಿ ಹೆಜ್ಜೆಯನ್ನಿಕ್ಕುತ್ತಿದೆ ಎಂದೇ ಹೇಳಬೇಕು.

ಭಾರತ ಮತ್ತು ಇರಾನ್ ಸಂಬಂಧ ಕ್ರಿ.ಪೂ. 3ನೆಯ ಶತಮಾನದಿಂದ ಅಂದರೆ ಮೌರ್ಯರ ಕಾಲದಿಂದಲೂ ಬೆಳೆದು ಬಂದಿತ್ತೆಂದು ಇತಿಹಾಸದ ದಾಖಲೆಗಳು ಹೇಳುತ್ತವೆ. ಪಾಕಿಸ್ತಾನಕ್ಕೆ ಪೂರ್ವದಲ್ಲಿ ಅದು ನಮ್ಮ ನೆರೆಯ ರಾಷ್ಟ್ರವೇ ಆಗಿತ್ತು. ಇನ್ನು ಆಧುನಿಕಕಾಲದಲ್ಲಿ ನಮ್ಮ ರೂಪಾಯಿ ಅಥವಾ ಅಕ್ಕಿ ಮೊದಲಾದ ಆಹಾರ ಪದಾರ್ಥಗಳನ್ನು ಪಡೆದು ನಮಗೆ ತೈಲ ಸರಬರಾಜು ಮಾಡಿದ ರಾಷ್ಟ್ರ ಇರಾನ್. ಅದನ್ನು ಮಿತ್ರ ರಾಷ್ಟ್ರವೆಂದು ನಾವು ಪರಿಗಣಿಸಬೇಕಾಗುತ್ತದೆ.

ಈ ಯುದ್ಧ ಕೇವಲ ಮಾನವ ಸಂಪನ್ಮೂಲವನ್ನು ಹಾಳು ಮಾಡುವುದಿಲ್ಲ. ಅಪಾರ ಪ್ರಮಾಣ ವಿಶ್ವದ ಆರ್ಥಿಕ ಸಂಪನ್ಮೂಲವನ್ನು ನಾಶ ಮಾಡುತ್ತಿದೆ. ಮಧ್ಯಪ್ರಾಚ್ಯ ದೇಶಗಳಲ್ಲಿ ರಿಯಲ್ ಎಸ್ಟೇಟ್‌ನ ವ್ಯವಹಾರಗಳಲ್ಲಿ ಬೇರೆ ಬೇರೆ ದೇಶದ ಉದ್ಯಮಿಗಳಂತೆ ನಮ್ಮ ದೇಶದ ಉದ್ಯಮಿಗಳು ಅಪಾರ ಪ್ರಮಾಣದ ಹಣವನ್ನು ಹೂಡಿಕೆ ಮಾಡಿದ್ದಾರೆ. ಇಂದು ಅವರೆಲ್ಲಾ ಸಂಕಷ್ಟದಲ್ಲಿದ್ದಾರೆ. ಈ ರಾಷ್ಟ್ರದಲ್ಲಿರುವ ಮೂಲಭೂತಸೌಕರ್ಯ ಊಹೆ ನಿಲುಕದಷ್ಟು ಉತ್ಕೃಷ್ಟವಾಗಿದೆ. ದುಬೈ ಹತ್ತಿರವಿರುವ Palm Jumeirah Hotel ಸಮುದ್ರ ಮಧ್ಯೆ ಅರಳಿ ನಿಂತಿದೆ. ಇದರ ನಿರ್ಮಾಣವೇ ದೊಡ್ಡ ಸಾಹಸದ ಕತೆ. ಇಂತಹ ಅನೇಕ ಕಡೆ ನಮ್ಮ ದೇಶದ ಹೂಡಿಕೆಗಳಿವೆ.

ದುಬೈನಲ್ಲಿರುವ 'ಮ್ಯೂಸಿಯಂ ಆಫ್ ದಿ ಫ್ಯೂಚರ್' ವಸ್ತುಸಂಗ್ರಹಾಲಯ ಇಲ್ಲಿಗೆ ಸಂದರ್ಶಕರನ್ನು 2071ನೇ ಇಸವಿಗೆ ಕರೆದುಕೊಂಡು ಹೋಗುತ್ತದೆ. ಇದನ್ನು ದುಬೈನ ಆಡಳಿಗಾರರ ಶೇಖ್ ಮೊಹಮ್ಮದ ಅಲ್ ಮಕ್ತೌಮ್ ನಿರ್ಮಿಸಿದ್ದಾರೆ. ಇದು ವಿಶ್ವ ಪ್ರಸಿದ್ಧ ಮ್ಯೂಸಿಯಂ ಎಂದು ಖ್ಯಾತಿ ಪಡೆದಿದೆ.

ಯುಎಇಯ ರಾಜಧಾನಿ ಅಬುಧಾಬಿಯ ಮತ್ತೊಂದು ವಿನ್ಯಾಸ ವಿಶ್ವದ ಜನರ ಗಮನ ಸೆಳೆದಿದೆ. ಫ್ರಾನ್ಸ್‌ನ 'ಲೌವ್ರೆ' ವಸ್ತು ಸಂಗ್ರಹಾಲಯದ ಶಾಖೆಯನ್ನು 2017ರಲ್ಲಿ ಪ್ರಾರಂಭಿಸಲಾಗಿದೆ. ಕೇವಲ ಪ್ರಾರಂಭವಾದ ಎರಡು ವರ್ಷದಲ್ಲಿ ಎರಡು ದಶಲಕ್ಷ ಜನರು ಭೇಟಿಕೊಟ್ಟಿದ್ದರು. ಈಗ ಅದರ ಸಂಖ್ಯೆ ಅಗಾಧವಾಗಿ ಬೆಳೆದಿದೆ. 165 ಮಿಲಿಯನ್ ಯುರೋಗಳ ವೆಚ್ಚದಲ್ಲಿ ಇದನ್ನು ನಿರ್ಮಿಸಲಾಗಿದೆ.

ದುಬೈ ಸೇರಿದಂತೆ ಮಧ್ಯಪ್ರಾಚ್ಯ ದೇಶಗಳು ಯುರೋಪ್, ಏಷ್ಯಾ ದೇಶಗಳ ವಾಣಿಜ್ಯೋದ್ಯಮದ ತಾಣವಾಗಿದೆ. ವಿಶ್ವದ ಎಲ್ಲಾ ಅಭಿವೃದ್ಧಿಶೀಲ ರಾಷ್ಟ್ರಗಳ ಬಂಡವಾಳ ಈ ಪ್ರದೇಶದಲ್ಲಿದೆ. ಅದರಲ್ಲಿ ಭಾರತದ ಹಿತಾಸಕ್ತಿಯೂ ಅಡಕವಾಗಿದೆ.

ಇರಾನ್, ಇಸ್ರೇಲ್ ಹಾಗೂ ಅಮೆರಿಕಾ ನಡುವೆ ನಡೆಯುತ್ತಿರುವ ಈ ಯುದ್ಧವು ವಿಶ್ವದ ಆರ್ಥಿಕ ಬೆಳವಣಿಗೆ ಕಂಟಕಪ್ರಾಯವಾಗಿದೆ. ಭಾರತ ಈ ಯುದ್ಧದ ನಿಲುಗಡೆಯ ಬಗೆಗೆ ಇತರರ ರಾಷ್ಟ್ರಗಳ ಮೇಲೆ ಒತ್ತಾಯವನ್ನು ಮಾಡಬೇಕಾಗಿದೆ.

ಭಾರತದ ಮೂಲ ಉದ್ದೇಶ ಹೀಗಿದೆ. ಎಲ್ಲ ರಾಷ್ಟ್ರಗಳ ನಡುವೆ ನಾವು ಉತ್ತಮ ಸಂಬಂಧವನ್ನು ಇಟ್ಟುಕೊಳ್ಳಬೇಕು, ಯಾವ ರಾಷ್ಟ್ರದ ನಾಯಕರನ್ನೂ ನಾವು ಎದುರು ಹಾಕಿಕೊಳ್ಳಬಾರದು. ಸೂಕ್ತವಾಗಿ ನಮ್ಮ ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಸಮತೋಲನವನ್ನು ಕಾಪಾಡಿಕೊಂಡು ರಕ್ಷಣೆ, ಆರ್ಥಿಕ ಪ್ರಗತಿ, ತಂತ್ರಜ್ಞಾನಗಳ ವರ್ಗಾವಣೆ ಮೊದಲಾದ ವಿಷಯಗಳಿಗೆ ತೊಂದರೆಯಾಗದಂತೆ, ನಮ್ಮ ಜನರ ಹಿತವನ್ನು ಕಾಪಾಡಬೇಕು. ಇಂದಿನ ಪರಿಸ್ಥಿತಿಯನ್ನು ಈಗಿನ ಸರ್ಕಾರವು ಬಹಳ ನಾಜೂಕಾಗಿ ನಿಭಾಯಿಸುತ್ತಿದೆ ಎಂಬುದನ್ನು ನಾವು ಅರಿಯಬೇಕು. ಭಾರತದ ಈ ನಿಲವಿನಿಂದ ವಿಶ್ವಮಟ್ಟದಲ್ಲಿ ಭಾರತದ ಹಿರಿಮೆ ಹೆಚ್ಚಾಗುತ್ತದೆ.

ಭಾರತದ ಇನ್ನೊಂದು ಮಾನವೀಯ ಮುಖವನ್ನು ನಾವು ಇಲ್ಲಿ ಗಮನಿಸಬೇಕು. ಇತ್ತೀಚೆಗೆ ಇರಾನಿಗೆ ಭಾರತವು ಈ ಪರಿಸ್ಥಿತಿಯಲ್ಲಿ ಅದಕ್ಕೆ ಅಗತ್ಯವಾದ ಔಷಧಗಳು, ವೈದ್ಯಕೀಯ ಸಾಮಗ್ರಿಗಳು ಮೊದಲಾದವುಗಳನ್ನು ಕಳುಹಿಸಿಕೊಟ್ಟಿದೆ. ಇವು ಈಗಾಗಲೇ ಇರಾನಿನಲ್ಲಿರುವ ರೆಡ್‌ಕ್ರಾಸ್ ಸಂಸ್ಥೆಯ ಕೈಸೇರಿದೆ. ಇದಕ್ಕೆ ಭಾರತದಲ್ಲಿರುವ ಇರಾನಿನ ರಾಯಭಾರ ಕಚೇರಿಯಿಂದ ಮತ್ತು ಇರಾನಿನ ಆಡಳಿತವರ್ಗದಿಂದ ಮೆಚ್ಚುಗೆ ವ್ಯಕ್ತವಾಗಿದೆ. ಪ್ರಸ್ತುತ ಇರಾನ್–ಇಸ್ರೇಲ್ ಯುದ್ಧದ ಸಂದರ್ಭದಲ್ಲಿ ಭಾರತವು ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿದೆ ಎಂದು ವಿದೇಶಾಂಗತಜ್ಞರು ಹೇಳುತ್ತಿದ್ದಾರೆ. ಭಾರತೀಯರ ಕಾಳಜಿಯೆಂದರೆ ಈ ದೇಶಗಳಲ್ಲಿರುವ ಭಾರತೀಯರ ಸುರಕ್ಷತೆ. ಇದನ್ನು ನಮ್ಮ ಸರ್ಕಾರವು ಖಂಡಿತವಾಗಿಯೂ ಗಮನದಲ್ಲಿಟ್ಟುಕೊಳ್ಳಬೇಕು.

▪ ನಿರೂಪಣೆ: ವಿ.ಕೃಷ್ಣ

## ಗ್ಲೋಬಲ್ ಹೆಲ್ತ್ ಕನೆಕ್ಟ್ - 2026

# ಶ್ರೀದೇವಿ ಅಲೈಡ್ ಆರೋಗ್ಯವಿಜ್ಞಾನ ಸಂಸ್ಥೆಯ ಅಂತಾರಾಷ್ಟ್ರೀಯ ಪ್ರಯಾಣ

■ **ಡಾ. ವಿ. ಪವಿತ್ರ**
**ಅಸೋಸಿಯೇಟ್ ಪ್ರಾಧ್ಯಾಪಕರು**
**ಶ್ರೀದೇವಿ ಅಲೈಡ್ ಹೆಲ್ತ್‌ಸೈನ್ಸ್**
**ಕ್ಲಿನಿಕ್ ರಿಸರ್ಚ್ ಇಲಾಖೆ**

ಶ್ರೀದೇವಿ ಆಲೈಡ್ ಹೆಲ್ತ್ ವಿಜ್ಞಾನ ಸಂಸ್ಥೆ (SIAHS), ತುಮಕೂರು, ಮಲೇಶಿಯಾದ MAHSA ವಿಶ್ವವಿದ್ಯಾಲಯದ ಸಹಯೋಗದಲ್ಲಿ, 2026ರ ಏಪ್ರಿಲ್ 3ರಿಂದ 5ರವರೆಗೆ ಗ್ಲೋಬಲ್ ವೈದ್ಯಕೀಯ ಸೇವೆ ಮತ್ತು ಆರೋಗ್ಯ ವಿಜ್ಞಾನದ ಮೇಲಿನ ಪ್ರಥಮ ಅಂತಾರಾಷ್ಟ್ರೀಯ 'ಗ್ಲೋಬಲ್ ಹೆಲ್ತ್ ಕನೆಕ್ಟ್ 2026' ಅನ್ನು ಮಲೇಶಿಯಾದ MAHSA ವಿಶ್ವವಿದ್ಯಾಲಯದಲ್ಲಿ ನಡೆಸಲಿದೆ ಎನ್ನುವುದನ್ನು ತಿಳಿಸಲು ಸಂತೋಷವಾಗುತ್ತಿದೆ.

ಜಗತ್ತಿನ ಈ ಭಾಗದ ಅಲೈಡ್ ಆರೋಗ್ಯವಿಜ್ಞಾನ ಸಂಸ್ಥೆಯೊಂದು ಇಂತಹ ವಿಶ್ವವೇದಿಕೆಯಲ್ಲಿ ಸಮ್ಮೇಳನವೊಂದನ್ನು ನಡೆಸಲು ಉಪಕ್ರಮಿಸಿರುವುದು ಆ ಸಂಸ್ಥೆಯ ಪ್ರಗತಿಯ ಮಾರ್ಗದಲ್ಲಿ ಒಂದು ಹೆಗ್ಗುರುತಾಗಿದೆಯೆಂಬುದನ್ನು ತೋರಿಸುತ್ತದೆ. ಏಕೆಂದರೆ, ಈ ಐತಿಹಾಸಿಕ ಅಂತಾರಾಷ್ಟ್ರೀಯ ಸಮ್ಮೇಳನವು ಪ್ರಾದೇಶಿಕ ಆಲೈಡ್ ಹೆಲ್ತ್ ಸಂಸ್ಥೆಯೊಂದು ಅಂತಾರಾಷ್ಟ್ರೀಯ ಸಹಯೋಗಕ್ಕೆ ಒತ್ತು ಕೊಡುವ ಅವಕಾಶವನ್ನು ಉಪಯೋಗಿಸಿಕೊಂಡು ಕ್ಲಿನಿಕಲ್ ಶಿಕ್ಷಣ, ಸಂಶೋಧನೆಗಳ ಕ್ಷೇತ್ರಕ್ಕೆ ಸಂಬಂಧಿಸಿದ ವೈಶ್ವಿಕ ಮಟ್ಟದ ಕಾರ್ಯಕ್ರಮವೊಂದನ್ನು ಸಂಘಟಿಸಿ, ವೈದ್ಯಕೀಯಕ್ಷೇತ್ರಕ್ಕೆ ಸೇವೆಯನ್ನು ಸಲ್ಲಿಸುವ ಉಪಕ್ರಮಕ್ಕೆ ಪ್ರಪ್ರಥಮ ಉದಾಹರಣೆಯಾಗಿದೆ.

### ಸಮ್ಮೇಳನದ ವಿಷಯ ಮತ್ತು ಉದ್ದೇಶ

ಈ ಸಮ್ಮೇಳನದ ವಿಷಯವೆಂದರೆ 'ಆಲೈಡ್ ಆರೋಗ್ಯ ಶಿಕ್ಷಣ, ಸಂಶೋಧನೆ ಮತ್ತು ಕ್ಲಿನಿಕಲ್ ಅಭ್ಯಾಸದಲ್ಲಿ ಜಾಗತಿಕ ಸಹಯೋಗವನ್ನು ಸದೃಢಪಡಿಸುವುದು'. ದೇಶಗಳ ಗಡಿಯನ್ನು ಮೀರಿ, ಸರ್ವರ ಆರೋಗ್ಯ ಹಿತವನ್ನು ಕಾಪಾಡಲು ಇರುವ ಸವಾಲುಗಳನ್ನು ಸೂಕ್ತವಾಗಿ ಎದುರಿಸಲು ಎಲ್ಲರೂ ಒಟ್ಟಾಗಿ ಮಾಡಬೇಕಾದ ಪ್ರಯತ್ನದ ಅಗತ್ಯವನ್ನು ಇದು ಪ್ರತಿಫಲಿಸುತ್ತದೆ. ಈ ಕ್ಷೇತ್ರದಲ್ಲಿ ಕಾರ್ಯನಿರತವಾಗಿರುವ ತಜ್ಞವೈದ್ಯರನ್ನು, ಸಂಶೋಧಕರನ್ನು ಮತ್ತು ಶೈಕ್ಷಣಿಕ ತಜ್ಞರನ್ನು ಒಂದೆಡೆ ಸೇರಿಸಿ, ವಿವಿಧ ಸಂಸ್ಥೆಗಳು ಮತ್ತು ಜ್ಞಾನದ ವಿವಿಧ ಶಾಖೆಗಳ ನಡುವೆ ಸೇತುವೊಂದನ್ನು ನಿರ್ಮಿಸುವುದು ಈ ಸಮ್ಮೇಳನದ ಉದ್ದೇಶವಾಗಿದೆ.

### ಮುಖ್ಯ ಉದ್ದೇಶಗಳು:

- ಆರೋಗ್ಯಸೇವೆ ಮತ್ತು ಮೆಡಿಕಲ್ ಸೈನ್ಸ್‌ಗಳಲ್ಲಿ ಜಾಗತಿಕ ಸಹಯೋಗವನ್ನು ಉತ್ತೇಜಿಸುವುದು
- ಆಲೈಡ್ ಆರೋಗ್ಯ ವಿಜ್ಞಾನದ ವಿವಿಧ ಶಾಖೆಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳ ನಡುವೆ ಸಮನ್ವಯವನ್ನು ಸಾಧಿಸುವುದು
- ವಿಜ್ಞಾನಿಗಳು ಮತ್ತು ಆರೋಗ್ಯಕ್ಷೇತ್ರದಲ್ಲಿ ವೃತ್ತಿನಿರತರಾಗಿರುವವರು ತಮ್ಮಲ್ಲಿರುವ ಜ್ಞಾನವನ್ನು ಹಾಗೂ ಅನುಭವವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದು
- ಆಧುನಿಕ ಸಂಶೋಧನೆಗಳಿಂದ ಆರೋಗ್ಯ ಕ್ಷೇತ್ರಕ್ಕೆ ದಕ್ಕುತ್ತಿರುವ ಹೊಸ ಸಂಶೋಧನೆಗಳನ್ನು, ತಂತ್ರಜ್ಞಾನವನ್ನು ಹಾಗೂ ಚಿಕಿತ್ಸಾ ವಿಧಾನಗಳನ್ನು ಸಂಬಂಧಪಟ್ಟ ಎಲ್ಲರ ಅರಿವಿಗೆ ತರುವುದು
- ವಿಶ್ವದಲ್ಲಿರುವ ವಿವಿಧ ಸಂಸ್ಥೆಗಳ ನಡುವಿನ ಶೈಕ್ಷಣಿಕ ಸಂಬಂಧಗಳನ್ನು ಬಲಪಡಿಸುವುದು

ಪ್ರಸ್ತುತ ಆಯೋಜಿಸಿರುವ ಸಮ್ಮೇಳನವು ತನ್ನ ಈ ಉದ್ದೇಶಗಳ ಮೂಲಕ, ಸಂಬಂಧಪಟ್ಟ ಅಂತಾರಾಷ್ಟ್ರೀಯ ಸಂಸ್ಥೆಗಳ ನಡುವೆ ಸಹಕಾರವನ್ನು ಉತ್ತೇಜಿಸಿ, ಪ್ರಗತಿಪಥದಲ್ಲಿ ನಿರಂತರವಾಗಿ ಸಾಗುತ್ತಿರುವ ಆರೋಗ್ಯ, ಶಿಕ್ಷಣ ಮತ್ತು ಸಂಶೋಧನೆಗಳಿಗೆ ತನ್ನ ಕೊಡುಗೆಯನ್ನು ನೀಡಲು ಉದ್ದೇಶಿಸಿದೆ.




### ವಿಶ್ವದ ವೇದಿಕೆಯಲ್ಲಿ ವಿದ್ವತ್ತಿನ ವಿನಿಮಯ

ತಜ್ಞರು, ಚಿಕಿತ್ಸಕರು, ಸಂಶೋಧಕರು ಮತ್ತು ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ ಅವರ ನಡುವೆ ಆರೋಗ್ಯ ಕ್ಷೇತ್ರದಲ್ಲಿ ಆಗುತ್ತಿರುವ ಸಮಕಾಲೀನ ಪ್ರಗತಿಗಳ ಬಗೆಗೆ ವಿಚಾರವನ್ನು, ವಿನಿಮಯವನ್ನು ಮಾಡಿಕೊಳ್ಳಲು ಅನುವಾಗುವಂತಹ ವೇದಿಕೆಯನ್ನು ಕಲ್ಪಿಸುವುದು ಈ ಗ್ಲೋಬಲ್ ಹೆಲ್ತ್‌ಕೇರ್ ಕನೆಕ್ಟ್–2026 ಸಮ್ಮೇಳನದ ಉದ್ದೇಶವಾಗಿದೆ. ಸಮ್ಮೇಳನವು ಅದರ ಉದ್ದೇಶ ಮತ್ತು ವ್ಯಾಪ್ತಿ, ವಿವಿಧ ವಿಷಯಗಳ ಮೇಲೆ ತಜ್ಞರಿಂದ ಭಾಷಣ, ಸಂಶೋಧನಾ ಲೇಖನಗಳ ಮಂಡನೆ, ವಿಚಾರ ವಿನಿಮಯ, ಮೊದಲಾದವುಗಳನ್ನು ಒಳಗೊಂಡಿರುತ್ತವೆ. ವಿಚಾರವಿನಿಮಯದಲ್ಲಿ ಪಾಲುಗೊಳ್ಳಲು ಸಾಧ್ಯವಾದಷ್ಟೂ ಆಸಕ್ತ ಜನರಿಗೂ ಅವಕಾಶಗಳಿರುತ್ತವೆ.

ಬೇರೆಬೇರೆ ದೇಶಗಳ ಪ್ರಖ್ಯಾತ ತಜ್ಞರು, ಸದ್ಯದಲ್ಲಿ ಚಾಲ್ತಿಯಲ್ಲಿರುವ ವಿಧಾನಗಳು, ಚಿಕಿತ್ಸೆಗಳಲ್ಲಿನ ನಾವೀನ್ಯ, ಈ ಕ್ಷೇತ್ರಕ್ಕೆ ಸಂಬಂಧಿಸಿದ ನೀತಿ, ನಿಯಮಗಳು, ಮೊದಲಾದವುಗಳನ್ನು ಕುರಿತು ತಮ್ಮ ವಿಚಾರವನ್ನು ಪ್ರಸ್ತುತಪಡಿಸುತ್ತಾರೆ. ಅವರ ಈ ಪ್ರಸ್ತುತಿಗಳು ವೃತ್ತಿಪರ ಚಿಕಿತ್ಸಕರ ನಡುವೆ ಅರ್ಥಪೂರ್ಣವಾದ ಸಂವಾದಕ್ಕೆ ಮತ್ತು ಅವರು ತಮ್ಮ ವೃತ್ತಿನಿರ್ವಹಣಾ ಸಮಯದಲ್ಲಿ ಎದುರಾಗುವ ಸವಾಲುಗಳನ್ನು ಹೇಗೆ ಎದುರಿಸಬೇಕೆಂಬುದನ್ನು ಕುರಿತ ಜ್ಞಾನವನ್ನು ಪಡೆದುಕೊಳ್ಳುವುದಕ್ಕೆ ಎಡೆ ಮಾಡಿಕೊಡುತ್ತದೆ.


ಈ ಸಮ್ಮೇಳನವು ಯುವ ಸಂಶೋಧಕರಿಗೆ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅವರವರ ಸಂಶೋಧನೆಯನ್ನು ಮತ್ತು ವಿಚಾರಗಳನ್ನು ಮಂಡಿಸಲು ಅತ್ಯುತ್ತಮವಾದ ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ. ಈ ಅವಕಾಶಗಳು ಶೈಕ್ಷಣಿಕ ಕ್ಷೇತ್ರದಲ್ಲಿನ ಅವರ ಆತ್ಮವಿಶ್ವಾಸವನ್ನು ವೃದ್ಧಿಪಡಿಸುವುದಷ್ಟೇ ಅಲ್ಲದೆ, ಮುಂದೆ ಸಂಶೋಧನೆಯನ್ನು ಕೈಗೊಳ್ಳಲು ಉತ್ಸಾಹವನ್ನು ತುಂಬುತ್ತದೆ ಮತ್ತು ಅವರ ದೃಷ್ಟಿಕೋನವನ್ನು ವಿಶಾಲಗೊಳಿಸುತ್ತದೆ.

### ಸಾಂಸ್ಥಿಕ ಸಂಬಂಧಗಳನ್ನು ಸಬಲಗೊಳಿಸುವುದು

ಗ್ಲೋಬಲ್ ಹೆಲ್ತ್ ಕನೆಕ್ಟ್–2026 ಸಮ್ಮೇಳನದ ಬಹು ಮುಖ್ಯ ವಿಷಯವೆಂದರೆ ಅದು ತುಮಕೂರಿನ ಶ್ರೀದೇವಿ ಆಲೈಡ್ ಹೆಲ್ತ್ ವಿಜ್ಞಾನ ಸಂಸ್ಥೆ (SIAHS) ಮತ್ತು ಮಲೇಶಿಯಾದ MAHSA ವಿಶ್ವವಿದ್ಯಾಲಯಗಳ ನಡುವಿನ ಸಹಯೋಗದಿಂದ ನಡೆಯುತ್ತಿರುವುದು. ಜಗತ್ತಿನಲ್ಲಿ ವಿವಿಧ ಸಂಸ್ಥೆಗಳ ನಡುವೆ ನಡೆಯುತ್ತಿರುವ ಶೈಕ್ಷಣಿಕ ಸಹಯೋಗದ ಮಹತ್ತ್ವವನ್ನು ಕುರಿತು ಇದು ಅತ್ಯುತ್ತಮ ಸಂಕೇತವನ್ನು ಸಾರುತ್ತದೆ.

MAHSA ವಿಶ್ವವಿದ್ಯಾಲಯವು ಆಗ್ನೇಯ ಏಷಿಯಾದಲ್ಲಿ ವೈದ್ಯಕೀಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯಿಂದಾಗಿ ಖ್ಯಾತಿಯನ್ನು ಪಡೆದಿದೆ. ತನ್ನ ಆವರಣದಲ್ಲಿ ಈ ಸಮ್ಮೇಳನವನ್ನು ಈ ವಿಶ್ವವಿದ್ಯಾಲಯವು ನಡೆಸುತ್ತಿರುವುದರಿಂದ ಸಮ್ಮೇಳನಕ್ಕೆ ಅಂತಾರಾಷ್ಟ್ರೀಯ ಆಯಾಮ ದೊರಕಲಿದೆ. ವೈವಿಧ್ಯಮಯವಾದ ಅನುಭವಗಳನ್ನು, ಆಳವಾದ ಸಾಂಸ್ಕೃತಿಕ ಮತ್ತು ವೃತ್ತಿಪರತೆಯನ್ನು ಹೊಂದಿರುವ ಪ್ರಖ್ಯಾತ ತಜ್ಞರ ಮತ್ತು ಇತರ ವೈದ್ಯಕೀಯ ಕ್ಷೇತ್ರದಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ವ್ಯಕ್ತಿಗಳೊಡನೆ ಸಂವಹನ ನಡೆಸುವ ಅವಕಾಶವನ್ನು ಭಾಗವಹಿಸುತ್ತಿರುವವರಿಗೆ ಇದು ಒದಗಿಸಿಕೊಡುತ್ತದೆ.

## CHIEF PATRONS



**Dr. M R Hulinaykar**
Chairman,
Sri Shridevi
Charitable Trust (R),
Tumakuru



**Dr. Raman Hulinaykar**
Director & Trustee
Sri Shridevi
Charitable Trust (R),
Tumakuru



**Professor Tan Sri Datuk Dr. Hj Mohamed Haniffa bin Hj Abdullah**
Pro-Chancellor and
Executive Chairman,
MAHSA University, Malaysia.

## ORGANISING COMMITTEE



**Dr Krishna M C**
Principal,Shridevi Institute
of Allied Health Sciences,
Tumkur



**Dr Nagaraja Suryadevara**
Associate Professor
Director, Centre for Pre-University
Studies, Chair, Student Experience
and Student Success
MAHSA University, Malaysia.



**Mr. Rajkumar S**
In-charge, Dept. of CCT,
Shridevi Institute of Allied
Health Sciences, Tumkur

## SCIENTIFIC COMMITTEE



**Dr C.P. Chandrappa**
Vice Principal, Professor
and HOD,
Dept of Clinical Research
Shridevi Institute of Allied
Health Sciences, Tumkur



**Kuppusamy Murugesan**
Associate Professor –
Department Of Anatomy,
International Higher
School of Medicine,
Kyrgyzstan



**Dr Pavithra V**
Associate Professor,
Dept of Clinical Research,
Shridevi Institute of Allied
Health Sciences,
Tumkur

ಇಂತಹ ಸಹಯೋಗವು ಭಾಗವಹಿಸಿರುವ ಸಂಸ್ಥೆಗಳ ನಡುವೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು, ಜಂಟಿಯಾಗಿ ಸಂಶೋಧನಾ ಕಾರ್ಯಗಳನ್ನು ಮುಂದುವರಿಸಲು, ಬೋಧಕ ವರ್ಗದವರ ನಡುವೆ ಸಹಕಾರವನ್ನು ಪಡೆಯಲು, ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳನ್ನು ಒದಗಿಸಲು ದಾರಿಯನ್ನು ಮಾಡಿಕೊಡುತ್ತದೆ ಹಾಗೂ ವೈದ್ಯಕೀಯ ಶಿಕ್ಷಣದಲ್ಲಿ ಒಂದು ಉತ್ತಮವಾದ ಶೈಕ್ಷಣಿಕ ವಾತಾವರಣವನ್ನು ಸೃಷ್ಟಿಸುತ್ತದೆ.

### ಸಂಶೋಧನೆ ಮತ್ತು ನಾವೀನ್ಯಕ್ಕೆ ಪ್ರೋತ್ಸಾಹ

ಇತ್ತೀಚಿನ ವರ್ಷಗಳಲ್ಲಿ, ಅಲೈಡ್ ಆರೋಗ್ಯ ವಿಜ್ಞಾನಗಳು ಆಧುನಿಕ ವೈದ್ಯಕೀಯ ಸೇವೆಯಲ್ಲಿ ಹೆಚ್ಚು ಹೆಚ್ಚು ಮಹತ್ತ್ವವಾದ ಪಾತ್ರವನ್ನು ವಹಿಸುತ್ತಿವೆ. ಮಾನಸಿಕ ಚಿಕಿತ್ಸೆ, ಪ್ರಾಯೋಗಿಕ ತಂತ್ರಜ್ಞಾನ, ರೇಡಿಯಾಲಜಿ, ಪೌಷ್ಟಿಕತೆ ಮತ್ತು ತತ್ಸಂಬಂಧಿ ಶಾಖೆಗಳಲ್ಲಿ ವೃತ್ತಿಪರರು ಅಮೂಲ್ಯವಾದ ಕೊಡುಗೆಗಳನ್ನು ನೀಡುತ್ತಿದ್ದಾರೆ.

ಈ ಶಾಖೆಗಳಲ್ಲಿ ತೊಡಗಿಕೊಂಡಿರುವ ವೃತ್ತಿಪರರ ಹೊಸಕಲ್ಪನೆಗಳಿಗೆ, ಸಂಶೋಧನಾ ಪ್ರವೃತ್ತಿಗೆ ಉತ್ತೇಜನವನ್ನು ನೀಡಿ ಅವರ ಪರಿವರ್ತನಾಶೀಲವಾದ ಪಾತ್ರವನ್ನು ಗ್ಲೋಬಲ್ ಹೆಲ್ತ್ ಕನೆಕ್ಟ್ 2026 ಎಲ್ಲರಿಗೂ ಮನದಟ್ಟು ಮಾಡಿಕೊಡಲು ಉದ್ದೇಶಿಸಿದೆ. ಸಂಶೋಧಕರು ಈ ಮುಂದಿನ ವಿಷಯಗಳ ಮೇಲೆ ತಮ್ಮ ಸಂಶೋಧನಾ ವರದಿಯನ್ನು ಮಂಡಿಸಲಿದ್ದಾರೆ.

- ರೋಗನಿದಾನದಲ್ಲಿ ಆಗಿರುವ ಪ್ರಗತಿಗಳು
- ಪುನರ್ವಸತಿ ವಿಜ್ಞಾನದಲ್ಲಿ ಆಗುತ್ತಿರುವ ಬೆಳವಣಿಗೆಗಳು
- ರೋಗಿಗಳ ಆರೈಕೆಯಲ್ಲಿ ವಿವಿಧ ಶಾಖೆಗಳ ನಡುವೆ ನಡೆಯುತ್ತಿರುವ ಸಮನ್ವಯ
- ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿರುವ ಸವಾಲುಗಳು ಮತ್ತು ಅವುಗಳ ನಿವಾರಣೆಗಳು
- ಆರೋಗ್ಯ ಸೇವೆಯಲ್ಲಿ ತಂತ್ರಜ್ಞಾನದ ಅಗತ್ಯ ಮತ್ತು ಅವುಗಳಲ್ಲಿ ಆಗುತ್ತಿರುವ ಪ್ರಗತಿ.

ಹೀಗೆ ಜ್ಞಾನವನ್ನು ವಿನಿಮಯ ಮಾಡಿಕೊಳ್ಳುವುದರ ಮೂಲಕ ಈ ಸಮ್ಮೇಳನವು ಹೊಸ ಸಂಶೋಧನಾ ಕಾರ್ಯಗಳನ್ನು ನಡೆಸಲು ಸ್ಫೂರ್ತಿಯನ್ನು ಒದಗಿಸಲು ಮತ್ತು ಈ ಸಂಶೋಧನೆಗಳ ಲಾಭವನ್ನು ನಮ್ಮ ಸೇವಾ ಕ್ಷೇತ್ರಕ್ಕೆ ತಲುಪಿಸಲಿದೆ.

### ವಿದ್ಯಾರ್ಥಿ ಸಮುದಾಯ ಹಾಗೂ ಯುವವೃತ್ತಿಪರರಿಗೆ ಅವಕಾಶಗಳು

ಈ ಸಮ್ಮೇಳನದ ಮುಖ್ಯವಾದ ಇನ್ನೊಂದು ಉದ್ದೇಶವೆಂದರೆ, ವಿದ್ಯಾರ್ಥಿಗಳಿಗೆ ಮತ್ತು ವೃತ್ತಿಪರಕ್ಷೇತ್ರಕ್ಕೆ ಈಗ ತಾನೆ ಕಾಲಿಟ್ಟಿರುವ ಯುವಕರಿಗೆ ತಮ್ಮ ಕ್ಷೇತ್ರಗಳಲ್ಲಿ ಹೆಚ್ಚಿನದನ್ನು ಕಲಿಯಲು ಅಮೂಲ್ಯವಾದ ಅವಕಾಶಗಳನ್ನು ಒದಗಿಸಿಕೊಡುವುದು.

▶▶ 6ನೇ ಪುಟಕ್ಕೆ...

TOP RANKERS – UG



**Aishwarya Radder**
Microbiology – 86.33%
Ophthalmology – 87.00%
Pharmacology - 85.67%



**Abhijeet Manjunath Bhandari**
Pathology – 84.33%

TOP RANKERS – PG



**Dr. Thrupti N S**
Emergency Medicine – 79.75%



**Dr. Shwetha Jangala**
ENT – 75.50%

# ಶ್ರೀದೇವಿ ವೈದ್ಯಕೀಯ ಕಾಲೇಜು ಮತ್ತು ಇತರೆ ವೈದ್ಯಕೀಯ ಕೋರ್ಸ್‌ಗಳಲ್ಲಿ 95 ರ್‍ಯಾಂಕ್

ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ 2025–2026 ನೇ ಸಾಲಿನಲ್ಲಿ ನಡೆಸಿದ ವಿವಿಧ ವೈದ್ಯಕೀಯ ಕೋರ್ಸ್‌ಗಳ ವಿಷಯಧಾರಿತ ಪರೀಕ್ಷೆಗಳಲ್ಲಿ ಶ್ರೀದೇವಿ ವೈದ್ಯಕೀಯ ಕಾಲೇಜಿನ 95 ವಿದ್ಯಾರ್ಥಿಗಳು ರ್‍ಯಾಂಕ್ ಗಳಿಸಿ ಶೈಕ್ಷಣಿಕ ವಲಯದಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಈ ರ್‍ಯಾಂಕ್‌ಗಳ ವಿವರ ಹೀಗಿದೆ. ಎಂ.ಬಿ.ಬಿ.ಎಸ್ 4, ವೈದ್ಯಕೀಯದ ಸ್ನಾತಕೋತ್ತರ ವಿಷಯಗಳಲ್ಲಿ 2, ರಮಣ ಮಹರ್ಷಿ ನರ್ಸಿಂಗ್ ಕಾಲೇಜು 2, ಶ್ರೀದೇವಿ ನರ್ಸಿಂಗ್ ಕಾಲೇಜು 8, ಶ್ರೀದೇವಿ ಫಾರ್ಮಸಿ ಕಾಲೇಜು 58 ಹಾಗೂ ಫಿಜಿಯೋಥೆರಪಿ ಕೋರ್ಸ್‌ಗಳಲ್ಲಿ 21.

ಎಂ.ಬಿ.ಬಿ.ಎಸ್ ವಿಭಾಗದಲ್ಲಿ ಡಾ. ಐಶ್ವರ್ಯ ರಾಡರ್ ಮೈಕ್ರೋ ಬಯೋಲಜಿ ಹಾಗೂ ಆಪ್ತಾಲ್ಮಾಲಜಿಯಲ್ಲಿ 2ನೆಯ ಮತ್ತು ಫಾರ್ಮಕಾಲಜಿಯಲ್ಲಿ 10ನೆಯ ರ್‍ಯಾಂಕ್, ಡಾ. ಅಭಿಜಿತ್ ಭಂಡಾರಿ ರೋಗಶಾಸ್ತ್ರ ವಿಭಾಗದಲ್ಲಿ 7ನೆಯ ರಾಂಕ್ ಗಳಿಸಿದ್ದಾರೆ. ವೈದ್ಯಕೀಯ ಸ್ನಾತಕೋತ್ತರ ಪದವಿ ವಿಭಾಗದಲ್ಲಿ ಡಾ. ತೃಪ್ತಿ ಎನ್.ಎಸ್. ತುರ್ತು ಔಷಧ ವಿಷಯದಲ್ಲಿ ಪ್ರಥಮ ರ್‍ಯಾಂಕ್, ಡಾ. ಶ್ವೇತಾ ಜಂಗಾಲ ಇ.ಎನ್.ಟಿ ವಿಭಾಗದಲ್ಲಿ 6ನೇ ರ್‍ಯಾಂಕ್ ಗಳಿಸಿದ್ದಾರೆ.

ಉಳಿದಂತೆ, ಬಿ–ಫಾರ್ಮ ಕೋರ್ಸ್‌ನಲ್ಲಿ 58 ವಿದ್ಯಾರ್ಥಿಗಳು, ರಮಣ ಮಹರ್ಷಿ ನರ್ಸಿಂಗ್ ಕಾಲೇಜಿನಿಂದ ಇಬ್ಬರು ವಿದ್ಯಾರ್ಥಿಗಳು, ಶ್ರೀದೇವಿ ನರ್ಸಿಂಗ್ ಕಾಲೇಜಿನ 8 ವಿದ್ಯಾರ್ಥಿಗಳು ಹಾಗೂ ಫಿಜಿಯೋಥೆರಪಿಯ 21 ವಿದ್ಯಾರ್ಥಿಗಳು ರ್‍ಯಾಂಕ್ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಫಿಜಿಯೋಥೆರಪಿ ವಿಭಾಗದಲ್ಲಿ ರಿಯಾಕುಟು ಅವರು ಒಂದು ಮತ್ತು ಏಳನೇ ರ್‍ಯಾಂಕ್‌ನೊಂದಿಗೆ ಚಿನ್ನದ ಪದಕ ಗಳಿಸಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಈ ವಿಭಾಗದಲ್ಲಿ ಒಟ್ಟು 11 ವಿದ್ಯಾರ್ಥಿಗಳು 21 ರ್‍ಯಾಂಕ್ ಗಳಿಸಿದ್ದಾರೆ.

ವಿದ್ಯಾರ್ಥಿಗಳು, ಬೋಧಕ ವರ್ಗದ ಸತತ ಪರಿಶ್ರಮದಿಂದ ಕಾಲೇಜು ಶೈಕ್ಷಣಿಕ ವಲಯದಲ್ಲಿ ಹೆಚ್ಚಿನ ಪ್ರಗತಿ ಸಾಧನೆ ಮಾಡಿದೆ. ಇದಕ್ಕೆ ಕಾರಣರಾದ ಎಲ್ಲಾ ವಿಭಾಗದ ಪ್ರಿನ್ಸಿಪಾಲರಿಗೆ, ಅಧ್ಯಾಪಕರಿಗೆ ಮತ್ತಿತರ ಸಿಬ್ಬಂದಿಯನ್ನು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಡಾ. ಎಂ.ಆರ್. ಹುಲಿನಾಯ್ಕರ್, ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ನಿರ್ದೇಶಕ ರಮಣ್ ಹುಲಿನಾಯ್ಕರ್, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್. ಪಾಟೀಲ್, ಶ್ರೀದೇವಿ ಚಾರಿಟಬಲ್ ಟ್ರಸ್ಟಿನ ಟ್ರಸ್ಟಿಗಳಾದ ಡಾ. ಲಾವಣ್ಯ ಮತ್ತು ಶ್ರೀಮತಿ ಅಂಬಿಕಾ ಹುಲಿನಾಯ್ಕರ್ ಅಭಿನಂದಿಸಿದರು.

ಪದವಿ ಮುಗಿಸಿದ ಬಹುತೇಕ ಎಲ್ಲ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮುಂದುವರಿಸುವ ಇಂಗಿತ ವ್ಯಕ್ತಪಡಿಸಿ, ಕಾಲೇಜಿನಲ್ಲಿ ಉತ್ತಮ ಶೈಕ್ಷಣಿಕ ವಾತಾವರಣವಿದ್ದು ಬೋಧಕ–ಬೋಧಕೇತರ ಮತ್ತು ಆಡಳಿತ ಮಂಡಳಿಯ ನಿರಂತರ ಪ್ರೋತ್ಸಾಹ, ಒತ್ತಾಸೆಯಿಂದ ಶೈಕ್ಷಣಿಕ ಸಾಧನೆ ಸಾಧ್ಯವಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

# ಶ್ರೀದೇವಿ ಅಲೈಡ್ ಆರೋಗ್ಯವಿಜ್ಞಾನ ಸಂಸ್ಥೆಯ ಅಂತಾರಾಷ್ಟ್ರೀಯ ಪ್ರಯಾಣ

▶▶ 5ನೇ ಪುಟದಿಂದ

ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸುವುದರಿಂದ ಹೊಸ ದೃಷ್ಟಿಕೋನಗಳು, ಸಂಶೋಧನಾ ವಿಧಾನಗಳು ಮತ್ತು ವೃತ್ತಿಪರತೆಗಳ ಪರಿಚಯವನ್ನು ಮಾಡಿ ಕೊಡುತ್ತದೆ. ಇಂತಹ ಅನುಭವವು ಅವರ ಚಿಂತನಾಶಕ್ತಿಯನ್ನು ಪ್ರಚೋದಿಸಿ, ಅವರನ್ನು ಕ್ರಿಯಾಶೀಲರನ್ನಾಗಿಸುತ್ತದೆ ಹಾಗೂ ಸಮಸ್ಯೆಗಳನ್ನು ಸಮರ್ಥವಾಗಿ ಪರಿಹರಿಸುವುದಕ್ಕೆ ಉತ್ತಮ ಅಡಿಪಾಯವನ್ನು ಹಾಕುತ್ತದೆ.

### ವಿಶ್ವದ ಮಟ್ಟದಲ್ಲಿ ತನ್ನ ಪ್ರಭಾವವನ್ನು ಸ್ಥಾಪಿಸಲು ನಮ್ಮ ಸಂಸ್ಥೆಗಿರುವ ಅವಕಾಶ

ಶ್ರೀದೇವಿ ಅಲೈಡ್ ಹೆಲ್ತ್ ವಿಜ್ಞಾನ ಸಂಸ್ಥೆಗೆ ಇದು ಕೇವಲ ಶೈಕ್ಷಣಿಕ ಸಮ್ಮೇಳನವಾಗಿರದೆ, ಅದರ ಸಾಂಸ್ಥಿಕ ಯಾತ್ರೆಯಲ್ಲಿ ದೊರಕಿರುವ ಒಂದು ಹೆಮ್ಮೆಯ ಕ್ಷಣವೂ ಆಗಿದೆ. ಈ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿ ಅದರಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವುದು ನಮ್ಮ ಸಂಸ್ಥೆಯು ಶೈಕ್ಷಣಿಕವಾಗಿ ಔನ್ನತ್ಯವನ್ನು ಸಾಧಿಸುವ, ಸಂಶೋಧನೆಯಲ್ಲಿ ಹೆಚ್ಚಿನ ಮಟ್ಟವನ್ನು ತಲುಪುವ ವೈಶ್ವಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವ ತನ್ನ ಅದಮ್ಯ ಉತ್ಸಾಹವನ್ನು ಪ್ರದರ್ಶಿಸುವ ಅವಕಾಶವೂ ಆಗಿದೆ.

ವರ್ಷಗಳು ಕಳೆದಂತೆ ನಮ್ಮ ಸಂಸ್ಥೆಯು ಅತ್ಯುತ್ತಮವಾದ ಅಲೈಡ್ ಆರೋಗ್ಯ ಶಿಕ್ಷಣವನ್ನು ನೀಡುವ ತನ್ನ ಖ್ಯಾತಿಯನ್ನು ವೃದ್ಧಿಸಿಕೊಳ್ಳುತ್ತಾ ಬಂದಿದೆ. ಈ ಖ್ಯಾತಿಯು ವಿಶ್ವದ ಮಟ್ಟದಲ್ಲಿ ಉತ್ತುಂಗಕ್ಕೆ ತಲುಪಲು ಈ ಸಮ್ಮೇಳನವು ಸಹಾಯವನ್ನು ಮಾಡುತ್ತದೆ.

### ಭವಿಷ್ಯದ ನೋಟ

ಆರೋಗ್ಯ ಸೇವಾಕ್ಷೇತ್ರದಲ್ಲಿ ಇಂದು ಹೊಸ ಹಾಗೂ ಸಂಕೀರ್ಣ ಸವಾಲುಗಳು ಎದುರಾಗುತ್ತಿವೆ. ಕಾರಣ, ಹೊಸ ರೀತಿಯ ಖಾಯಿಲೆಗಳು ತಲೆದೋರುತ್ತಿವೆ, ಜನರ ಆಯುರ್ಮಾನವು ಹೆಚ್ಚುತ್ತಿದೆ. ಇದರಿಂದಾಗಿ ರಾಷ್ಟ್ರಗಳ ಎಲ್ಲೆಯನ್ನು ಮೀರಿ, ನಮ್ಮ ಸಹಯೋಗವು ಬೆಳೆಯಬೇಕಾದ ಆವಶ್ಯಕತೆಯಿದೆ. ಈ ಸಮ್ಮೇಳನವು ಅಂತಹ ಬೆಳವಣಿಗೆಯ ಕ್ರಿಯೆಯಲ್ಲಿ ಒಂದು ವೇಗವರ್ಧಕವಾಗಲಿದೆ ಮತ್ತು ಒಟ್ಟಾರೆಯಾಗಿ, ಈ ಕ್ರಿಯೆಗೆ ಒಂದು ಸುಭದ್ರವಾದ ತಳಹದಿಯನ್ನು ಹಾಕಲಿದೆ.

■ ಕನ್ನಡಕ್ಕೆ: ವಿ.ಕೃಷ್ಣ

# ಶ್ರೀದೇವಿ ಅಂಗಳದಲ್ಲಿ ಸಾಧನೆಯ ಸಂಭ್ರಮ – ಪ್ರೇರಣೆಯ ಹಬ್ಬ

▶▶ ಮೊದಲನೇ ಪುಟದಿಂದ

ಸಾವಿರಾರು ಲ್ಯಾಪ್ರೋಸ್ಕೋಪಿಕ್ ಮತ್ತು ರೋಬೋಟಿಕ್ ಸರ್ಜರಿ ಮಾಡಿರುವುದರಿಂದ ಜಗತ್ತಿನ ಹಲವು ರಾಷ್ಟ್ರಗಳಲ್ಲಿ ನನಗೆ ಸನ್ಮಾನ, ಪ್ರಶಸ್ತಿ ದೊರಕಿದೆ. ಅದೆಲ್ಲಕ್ಕಿಂತಲೂ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಡಾ. ಹುಲಿನಾಯ್ಕರ್ ಪ್ರತಿಷ್ಠಾನದ ವತಿಯಿಂದ ನೀಡಿರುವ ಪ್ರಶಸ್ತಿ ಮುಖ್ಯವಾಗಿದ್ದು, ಇದು ನನ್ನ ಕರ್ತವ್ಯಪ್ರಜ್ಞೆಯನ್ನು ಮತ್ತಷ್ಟು ಹೆಚ್ಚಿಸಿದೆ. ಅರವತ್ತರ ನಂತರ ದೇಹ ವಿಶ್ರಾಂತಿ ಬಯಸುತ್ತದೆ. ಅದು ಪ್ರಕೃತಿಸಹಜ. ಆದ್ದರಿಂದ ಯುವಜನಾಂಗ ಚಿಕ್ಕವಯಸ್ಸಿನಲ್ಲಿ ಸಾಧನೆ ಮಾಡಿ ಗುರಿಯನ್ನು ತಲುಪಬೇಕು. ಅರವತ್ತು ವರ್ಷಗಳ ನಂತರ ಸಮಾಜ ಸೇವೆ ನಿಮ್ಮ ಆದ್ಯತೆಯಾಗಲಿ.

### ವೇಲು ಲ್ಯಾಪ್ರೋಸ್ಕೋಪಿಕ್ ಹೊಲಿಗೆ ವಿಶ್ವಕ್ಕೆ ಮಾದರಿ: ಡಾ. ಈಶ್ವರ್ ಆರ್. ಹೊಸಮನಿ, ಕಿಮ್ಸ್ ಆಸ್ಪತ್ರೆ ನಿರ್ದೇಶಕರು, ಹುಬ್ಬಳ್ಳಿ

"ಡಾ. ಪಳನಿವೇಲು ಅವರ ಪ್ರಯತ್ನದಿಂದಾಗಿ ಇಂದು ತಾಲೂಕು ಮತ್ತು ಸಣ್ಣ ಪುಟ್ಟ ಹಳ್ಳಿಗಳಲ್ಲೂ ವೈದ್ಯರು ಲ್ಯಾಪ್ರೋಸ್ಕೋಪಿಕ್ ಸರ್ಜರಿ ಮಾಡುವಂತಹ ವ್ಯವಸ್ಥೆ ರೂಪುಗೊಂಡಿದೆ. ಇದರಿಂದ ನೂರಾರು ಜನರ ಪ್ರಾಣ ಉಳಿಸಲು ವೈದ್ಯರಿಗೆ ಸಹಾಯವಾಗಿದೆ. ಆಪರೇಷನ್‌ನ ಅನಂತರ ಹೊಲಿಗೆ ವಿಧಾನ ಬಹಳ ಮುಖ್ಯವಾಗಿರುತ್ತದೆ. ಬಹಳ ಬೇಗ ಹೀಲಿಂಗ್ ಆಗುವಂತಹ ಹೊಲಿಗೆ ಕಂಡುಹಿಡಿದಿದ್ದರಿಂದ ಶಸ್ತ್ರಚಿಕಿತ್ರೆಗೆ ಒಳಗಾದವರು ಕೆಲವೇ ದಿನಗಳಲ್ಲಿ ಸಂಪೂರ್ಣ ಗುಣಮುಖರಾಗಿ ತಮ್ಮ ದೈನಂದಿನ ಕೆಲಸ–ಕಾರ್ಯಗಳನ್ನು ಮುಂದುವರಿಸಬಹುದಾಗಿದೆ.

ಡಾ. ಪಳನಿವೇಲು ಕಂಡು ಹಿಡಿದ ಹೊಲಿಗೆ ವಿಧಾನ ಜಗತ್ತಿನಾದ್ಯಂತ ಪ್ರಖ್ಯಾತವಾಗಿದೆ.




ಮುಂದುವರಿದ ರಾಷ್ಟ್ರಗಳು ಅದನ್ನೇ ಬಳಸುತ್ತಿವೆ. ಅಮೆರಿಕ, ಜಪಾನ್, ಜರ್ಮನ್, ಕೊರಿಯಾ, ಇಂಗ್ಲೆಂಡ್ ಸೇರಿದಂತೆ ವಿಶ್ವದ ಹಲವು ರಾಷ್ಟ್ರಗಳಿಂದ ಸರ್ಜರಿ ಮಾಡಿಸಿಕೊಳ್ಳಲು ಜನರು ಕೊಯಮತ್ತೂರಿಗೆ ಬರುತ್ತಿದ್ದಾರೆ. ಡಾ. ಪಳನಿವೇಲು ಅವರು ಅತ್ಯಂತ ಕಡಮೆ ವೆಚ್ಚದಲ್ಲಿ ಲ್ಯಾಪ್ರೋಸ್ಕೋಪಿಕ್ ಮತ್ತು ಅಂಕಾಲಜಿ ಸರ್ಜರಿ ಮಾಡುತ್ತಾರೆ. ಅವರ ಯಶಸ್ಸಿನ ಹಿಂದೆ ಅವರ ಪತ್ನಿ ಜಯಾ ಪಳನಿವೇಲು ಅವರ ತ್ಯಾಗ–ಪರಿಶ್ರಮವಿದೆ. ಅದರಿಂದಲೇ ಅವರಿಗೆ ವೃತ್ತಿಯಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯವಾಗಿದೆ. ಅದೇ ರೀತಿ ಮಗ–ಸೊಸೆ ಹೀಗೆ ಎಲ್ಲರ ಬೆಂಬಲ, ಸಹಕಾರ, ಒತ್ತಾಸೆಯಿಂದ ಡಾ. ಪಳನಿವೇಲು ಜಾಗತಿಕವಾಗಿ ಗುರುತಿಸಿಕೊಂಡಿದ್ದಾರೆ, ಬೆಳೆದಿದ್ದಾರೆ. ಹೆಸರು, ಕೀರ್ತಿಗಳನ್ನು ಗಳಿಸಿದ್ದಾರೆ.

ಡಾ. ಪಳನಿವೇಲು ಅವರೊಂದಿಗೆ ನನ್ನದು 30 ವರ್ಷಗಳ ಒಡನಾಟ. ಅವರು ನನ್ನ ಗುರುಗಳು. ಅವರಿಂದ ನಾನು ಲ್ಯಾಪ್ರೋಸ್ಕೋಪಿಕ್ ಸರ್ಜರಿ ಕಲಿತೆ. ಡಾ. ಪಳನಿವೇಲು ಅವರ ಅನನ್ಯ ಸಾಧನೆಯಿಂದಾಗಿ ಕೊಯಮತ್ತೂರು ಜಗತ್ತಿನ ರೋಬೋಟಿಕ್ ಶಸ್ತ್ರಚಿಕಿತ್ಸೆಯ ರಾಜಧಾನಿಯಾಗಿ ಪರಿವರ್ತನೆಯಾಗಿದೆ."



"ಡಾ. ಪಳನಿವೇಲು ದೇವರಕೃಪೆ ಮತ್ತು ಅವರ ಹಿರಿಯರ ಆಶೀರ್ವಾದದಿಂದಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ಸಾಧನೆ ಮಾಡಿದ್ದಾರೆ. ಅವರು ಬರೆದ ಆತ್ಮಕತೆ 'ಗಟ್ಸ್' ಎಂಬ ಕೃತಿ ಕನ್ನಡ, ಇಂಗ್ಲಿಷ್, ಹಿಂದಿ ಸೇರಿದಂತೆ ಅನೇಕ ಭಾಷೆಗಳಿಗೆ ಭಾಷಾಂತರವಾಗಿದೆ. ಮುಂದಿನ ತಿಂಗಳು ಒರಿಯಾ ಭಾಷೆಯಲ್ಲಿ ಈ ಕೃತಿ ಲೋಕಾರ್ಪಣೆಯಾಗುತ್ತಿರುವುದು ವೈದ್ಯಕೀಯ ಲೋಕಕ್ಕೆ ಸಂತಸದ ಕ್ಷಣವಾಗಿದೆ."

**ಬಸವರಾಜ ಪಾಟೀಲ್**
ರಾಷ್ಟ್ರೀಯ ಸ್ವಾಭಿಮಾನ್ ಪರಿಷತ್ ಅಧ್ಯಕ್ಷ, ನವದೆಹಲಿ



"ವೈದ್ಯಕೀಯ ಜಗತ್ತಿನ ಧ್ರುವತಾರೆ ಎನಿಸಿಕೊಂಡ ಡಾ. ಪಳನಿವೇಲು ಅವರಿಗೆ ಪ್ರಶಸ್ತಿ ನೀಡುವ ಮೂಲಕ ಶ್ರೀದೇವಿ ಸಂಸ್ಥೆಯ ಗೌರವ–ಘನತೆ ಹೆಚ್ಚಾಗಿದೆ. ಈ ಸಂಸ್ಥೆಯನ್ನು ಪ್ರತಿಭಾವಂತರ ತಾಣವನ್ನಾಗಿಸುವಲ್ಲಿ ಎಲ್ಲರ ಪರಿಶ್ರಮವಿದೆ. ಹೀಗಾಗಿ ಶ್ರೀದೇವಿ ಶಿಕ್ಷಣ ಸಂಸ್ಥೆ ಒಂದು ಕುಟುಂಬದ, ಒಬ್ಬ ವ್ಯಕ್ತಿಯ ಆಸ್ತಿಯಲ್ಲ ಸಮಾಜದ ಆಸ್ತಿಯಾಗಿದೆ. ನಾನು ಕೂಡ ಡಾ. ಪಳನಿವೇಲು ಅವರಿಂದ ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸೆಯನ್ನು ಕಲಿತು ಅದನ್ನು ಶ್ರೀದೇವಿ ಆಸ್ಪತ್ರೆಯಲ್ಲಿ ಅನುಸರಿಸುತ್ತಿದ್ದೇನೆ. ಇದೊಂದು ಹೆಮ್ಮೆಯ ಸಂಗತಿ."

**ಡಾ.ಎಂ.ಆರ್.ಹುಲಿನಾಯ್ಕರ್**
ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ ಸಂಸ್ಥಾಪಕರು



"ನಾವು ಎಷ್ಟು ಓದಿದ್ದೇವೆ ಎಂಬುದು ಮುಖ್ಯವಲ್ಲ, ಆ ಓದು ನಮಗೆ ಎಷ್ಟು ಸಂಸ್ಕಾರವನ್ನು ಕಲಿಸಿದೆ ಎಂಬುದಷ್ಟೇ ಮುಖ್ಯವಾಗುತ್ತದೆ. ಸಮಾಜಸೇವೆ, ಜನಸೇವೆ ವೈದ್ಯರ ಪರಮ ಗುರಿ ಎಂಬುದಕ್ಕೆ ಡಾ. ಪಳನಿವೇಲು ಮತ್ತು ಡಾ. ಎಂ.ಆರ್ ಹುಲಿನಾಯ್ಕರ್ ಅವರ ಬದುಕು ಸಾಕ್ಷಿಯಾಗಿದೆ. ಈ ಇಬ್ಬರ ಬದುಕು ಯುವಜನಾಂಗಕ್ಕೆ ಅನುಕರಣೆಗೆ ಯೋಗ್ಯವಾಗಿದೆ."

**ಡಾ. ಆಚಾರ್ಯ ಎಂ. ನಾಗರಾಜ್**
ಸಮಾರಂಭದ ಅಧ್ಯಕ್ಷರು
ಹಾಗೂ ಸುವರ್ಣಮುಖಿ ಸಂಸ್ಕೃತಿಧಾಮದ ಸ್ಥಾಪಕರು

**ನೆನಪಿನಲ್ಲಿಡಬೇಕಾದ ಮಾತು**



"ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲೂ ಇಂದು ಹಿಂಸೆ ಮೆರೆದಾಡುತ್ತಿದೆ. ಕೈಗೆ ಕೈ, ಕಣ್ಣಿಗೆ ಕಣ್ಣು ಎಂಬ ಬ್ಯಾಬಿಲೋನಿಯಾದ ದೊರೆ ಹಮ್ಮುರಾಬಿಯ ನೀತಿ ಎಲ್ಲೆಡೆ ವಿಜೃಂಭಿಸುತ್ತಿದೆ. ಜೈನಧರ್ಮವು ಸಹನೆ, ಶಾಂತಿ, ಸೌಹಾರ್ದತೆ, ವಾತ್ಸಲ್ಯ ಹಾಗೂ ತ್ಯಾಗವನ್ನು ಬೋಧಿಸುತ್ತದೆ. ಇದರ ಅಗತ್ಯ ಹಿಂದಿಗಿಂತ ಇಂದು ಹೆಚ್ಚಿದೆ.

**ಡಾ. ಎಂ. ವೀರಪ್ಪ ಮೊಯಿಲಿ**

('ಶ್ರೀಬಾಹುಬಲಿ ಅಹಿಂಸಾದಿಗ್ವಿಜಯಂ' ಮಹಾಕಾವ್ಯದ ನಾಂದೀಸಂಧಿಯಿಂದ ಗದ್ಯಾನುವಾದ: ಡಾ. ವಿ.ಎಸ್. ರಾಜಣ್ಣ)

# ಶಸ್ತ್ರಚಿಕಿತ್ಸೆಯ ಕ್ಷೇತ್ರಕ್ಕೆ ಡಾ.ಸಿ.ಪಳನಿವೇಲು ಅವರ ಅಭೂತಪೂರ್ವ ಕೊಡುಗೆ



▪ **ಪ್ರೊ. ಟಿ.ಎಸ್. ಭೀಮರಾಜ್**
ಪ್ರಾಧ್ಯಾಪಕರು,
ಮನಶ್ಶಾಸ್ತ್ರ ವಿಭಾಗ
ಶ್ರೀದೇವಿ ನರ್ಸಿಂಗ್ ಕಾಲೇಜು




ಲ್ಯಾಪ್ರೋಸ್ಕೋಪಿಕ್ ಮತ್ತು ರೊಬೊಟಿಕ್ ಶಸ್ತ್ರಚಿಕಿತ್ಸೆಯಲ್ಲಿ ದಂತಕಥೆಯಾಗಿರುವ ಡಾ. ಸಿ. ಪಳನಿವೇಲು ಅವರು ತಮಿಳುನಾಡಿನ ನಾಮಕಲ್ ತಾಲೂಕಿನ ಅವರಂಕಟ್ಟು ಪುದೂರಿನಲ್ಲಿ, ಶ್ರೀ ಚಿನ್ನುಸ್ವಾಮಿ ಮತ್ತು ಶ್ರೀಮತಿ ಕಾಳಿಯಮ್ಮಾಳ್ ಅವರ ಪುತ್ರನಾಗಿ 1950ರಲ್ಲಿ ಜನಿಸಿದರು. ಕಿತ್ತುತಿನ್ನುತ್ತಿದ್ದ ಬಡತನದಿಂದಾಗಿ ಅವರಿಗೆ ಪ್ರಾಥಮಿಕ ಶಿಕ್ಷಣವೂ ದೊರೆಯಲಿಲ್ಲ. ಆ ಸಂದರ್ಭದಲ್ಲಿ ಅವರ ಇಡೀ ಕುಟುಂಬ ಅನ್ನದ ದಾರಿಯನ್ನು ಕಂಡುಕೊಳ್ಳಲು ಮಲಯಾದ ಪೆನಂಗಿಗೆ ವಲಸೆ ಹೋಯಿತು. ಸ್ವಲ್ಪ ಕಾಲದ ಅನಂತರ ಭಾರತಕ್ಕೆ ಅವರು ಹಿಂದಿರುಗಿದರು.

ಇಲ್ಲಿಗೆ ಬಂದ ಮೇಲೆ ಊರಿನ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಸೇತುರಾಮನ್ ಮತ್ತು ಇತರ ಉಪಾಧ್ಯಾಯರಾಗಿದ್ದ ವೈಯಾಪುರಿ ಮತ್ತು ಗಾಂಧಿವಾದಿ ಮಾರಪ್ಪನ್ ಗೌಂಡರ್ ಅವರ ಪ್ರೋತ್ಸಾಹ ಮತ್ತು ಬೆಂಬಲದಿಂದ ಪಳನಿವೇಲು ವಿದ್ಯಾಭ್ಯಾಸವನ್ನು ಪ್ರಾರಂಭಿಸಿ, ಎಸ್.ಎಸ್.ಎಲ್.ಸಿ ಹಾಗೂ ಪದವಿಪೂರ್ವ ತರಗತಿಗಳಲ್ಲಿ ತೇರ್ಗಡೆಹೊಂದಿ ಮದ್ರಾಸಿನ ಸ್ಟ್ಯಾನ್ಲಿ ವೈದ್ಯಕೀಯ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್ ಮತ್ತು ಎಮ್.ಎಸ್. ಪದವಿಗಳನ್ನು ಪಡೆದರು.

ಆ ಸಮಯದಲ್ಲಿ ಡಾ. ಪಳನಿವೇಲು ಅವರು ಶ್ರೀಮತಿ ಜಯಾ ಎಂಬುವರನ್ನು ವಿವಾಹವಾದರು. ಅಂದಿನಿಂದಲೂ ಶ್ರೀಮತಿ ಜಯಾ ಅವರು ಡಾ. ಪಳನಿವೇಲು ಅವರ ಎಲ್ಲ ಸಾಧನೆಗಳಿಗೂ ಬೆಂಬಲವಾಗಿ ನಿಂತಿದ್ದಾರೆ. ಡಾ. ಪಳನಿವೇಲು ಅವರು ಸಿಂಗಪುರದಲ್ಲಿ 1991ರಲ್ಲಿ ನಡೆದ ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸೆಯಲ್ಲಿ ತರಬೇತಿಯನ್ನು ಪಡೆದು, ಅದರಲ್ಲಿ ಕೌಶಲವನ್ನು ಅಭಿವೃದ್ಧಿಪಡಿಸಿಕೊಂಡು ಭಾರತದಲ್ಲಿಯೇ ಅತ್ಯುತ್ತಮ ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸಕರೆಂಬ ಖ್ಯಾತಿಯನ್ನು ಪಡೆದರು.

ಇವರ ಕೌಶಲದ ಕಾರಣದಿಂದಾಗಿ ಇವರನ್ನು ಬ್ರಿಟನ್, ಜಪಾನ್, ಅಮೆರಿಕ ಮೊದಲಾದ ದೇಶಗಳು ಆಹ್ವಾನಿಸಿ ಅಲ್ಲಿ ಸೇವೆಯನ್ನು ಪಡೆದುಕೊಂಡವು. ಇಲ್ಲಿಯವರೆಗೆ. ಡಾ. ಪಳನಿವೇಲು ಅವರು ಹದಿನೆಂಟು ಸಾವಿರಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಯನ್ನು ಮಾಡಿದ್ದಾರೆ. ಇವರು ಅಭಿವೃದ್ಧಿಪಡಿಸಿದ ನೂತನ ಹೊಲಿಗೆಯ ಪದ್ಧತಿಯು ಇಂದು ವಿಶ್ವದಾದ್ಯಂತ – ಪಳನಿವೇಲು ಹೊಲಿಗೆ ಪದ್ಧತಿ – ಎಂದೇ ಪ್ರಸಿದ್ಧವಾಗಿದೆ. ಇದಲ್ಲದೆ ಇವರು ದೇಶ, ವಿದೇಶಗಳಲ್ಲಿ ಸಮ್ಮೇಳನ, ಕಾರ್ಯಾಗಾರಗಳನ್ನು ನಡೆಸಿ ಹಲವಾರು ಯುವ ಶಸ್ತ್ರಚಿಕಿತ್ಸಕರಿಗೆ ತರಬೇತಿಯನ್ನು ನೀಡಿದ್ದಾರೆ.

ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸೆಯನ್ನು ಜನಪ್ರಿಯಗೊಳಿಸಿದ ಡಾ. ಪಳನಿವೇಲು ಅವರು ಅದರ ಲಾಭವನ್ನು ಬಡವರನ್ನೂ ಒಳಗೊಂಡಂತೆ ಎಲ್ಲರಿಗೂ ದೊರಕುವಂತೆ ಮಾಡಿದ್ದಾರೆ. ಇವರು 250ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ರಾಷ್ಟೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಪ್ರಕಟಿಸಿ ಭಾರತದ ಕೀರ್ತಿಯನ್ನು ಎಲ್ಲೆಡೆ ಹರಡಿದ್ದಾರೆ . ಜಗತ್ತಿನಾದ್ಯಂತ ಹೆಸರು ಮಾಡಿರುವ ಡಾ. ಪಳನಿವೇಲು ಅವರು ಹಲವು ಮನ್ನಣೆಗಳಿಗೆ ಪಾತ್ರರಾಗಿದ್ದಾರೆ, ಅವುಗಳಲ್ಲಿ ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡಿನ ಪ್ರತಿಷ್ಠಿತ ಸಂಸ್ಥೆಗಳಿಂದ ಫೆಲೋಷಿಪ್‌ಗಳು, ಭಾರತ ಸರ್ಕಾರದಿಂದ ಎರಡು ಬಾರಿ 'ಡಾ. ಬಿ.ಸಿ. ರಾಯ್ ರಾಷ್ಟ್ರೀಯ ಪ್ರಶಸ್ತಿ'ಗಳು ಸೇರಿವೆ.

ಡಾ. ಪಳನಿವೇಲು ಅವರು ಕೊಯಮತ್ತೂರು ಮತ್ತು ಭಾರತದ ಇತರ ಪ್ರಮುಖ ನಗರಗಳಲ್ಲಿ ಗ್ಯಾಸ್ಟ್ರೋಎಂಟರಾಲಜಿ ಮತ್ತು ಇತರ ವೈದ್ಯಕೀಯ ಕೇಂದ್ರಗಳನ್ನು (Gastroenterology and Medical Centers - GEM Hospital) ಸ್ಥಾಪಿಸಿ ಅಲ್ಲಿ ತಮ್ಮ ಹೊಸ ಆವಿಷ್ಕಾರಗಳ ಮೂಲಕ ಕಡಮೆ ಖರ್ಚಿನಲ್ಲಿ ಎಲ್ಲ ಜನರಿಗೂ ವೈದ್ಯಕೀಯ ಚಿಕಿತ್ಸೆಯನ್ನು ನೀಡುತ್ತಿದ್ದಾರೆ. ಬಡವರ ಬಗೆಗೆ ಇರುವ ಅವರ ಕಾರುಣ್ಯ, ಸಹಾನುಭೂತಿಗಳ ಕಾರಣದಿಂದಾಗಿ ಇಂದು ಆರ್ಥಿಕವಾಗಿ ಹಿಂದುಳಿದ ಅನೇಕರಿಗೆ ಸುಲಭವಾಗಿ ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸೆಯಂತಹ ಆಧುನಿಕ ಚಿಕಿತ್ಸೆ ಲಭ್ಯವಾಗಿದೆ. ಅವರು ಹಲವಾರು ಪುಸ್ತಕಗಳ ಲೇಖಕರೂ ಹೌದು.



ವಿದ್ಯಾರ್ಥಿಗಳಿಗೆ ಮತ್ತು ಯುವ ಶಸ್ತ್ರಚಿಕಿತ್ಸಕರಿಗೆ ಅನುಕೂಲವಾಗುವಂತಹ ಹಲವಾರು ಪುಸ್ತಕಗಳನ್ನೂ ಮತ್ತು ತಮ್ಮ ಆತ್ಮಚರಿತ್ರೆ (ಗಟ್ಸ್) ಎಂಬ ಕೃತಿಯನ್ನೂ ರಚಿಸಿದ್ದಾರೆ.

ಡಾ. ಪಳನಿವೇಲು ಅವರಿಗೆ ಡಾ. ಎಮ್.ಆರ್. ಹುಲಿನಾಯ್ಕರ್ ಮತ್ತು ಶ್ರೀಮತಿ ಶಾಂತಾದೇವಿ ಹುಲಿನಾಯ್ಕರ್ ಅವರ ಹೆಸರಿನಿಲ್ಲಿರುವ ಜೀವಮಾನಸಾಧನೆಯ ಪ್ರಶಸ್ತಿಯನ್ನು ಮಾರ್ಚ್ 13ರಂದು ನೀಡಿ ಆತ್ಮೀಯವಾಗಿ ಸನ್ಮಾನಿಸಲಾಯಿತು.


ತುಮಕೂರಿನಲ್ಲಿರುವ ಡಾ. ಎಂ.ಆರ್. ಹುಲಿನಾಯ್ಕರ್ ಅವರು ಸ್ಥಾಪಿಸಿರುವ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳ ಆವರಣವನ್ನು ನೋಡಿ ಬಹಳ ಸಂತೋಷಪಟ್ಟು, ಅಲ್ಲಿ ವಿದ್ಯಾರ್ಥಿಗಳಿಗಾಗಿ ನೀಡುತ್ತಿರುವ ಸೌಲಭ್ಯಗಳಿಗಾಗಿ ಮತ್ತು ಶ್ರೀದೇವಿ ಆಸ್ಪತ್ರೆಯಲ್ಲಿ ಎಲ್ಲರಿಗೂ, ಅದರಲ್ಲಿಯೂ ಗ್ರಾಮೀಣ ಜನರಿಗೂ ನೀಡುತ್ತಿರುವ ವೈದ್ಯಕೀಯ ಸೌಲಭ್ಯಗಳಿಗಾಗಿ ಡಾ. ಎಂ.ಆರ್. ಹುಲಿನಾಯ್ಕರ್ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದರು ಹಾಗೂ ಅಲ್ಲಿ ತಮ್ಮನ್ನು ಆತ್ಮೀಯವಾಗಿ ಸನ್ಮಾನಿಸಿದುದಕ್ಕಾಗಿ ಡಾ. ಎಂ.ಆರ್. ಹುಲಿನಾಯ್ಕರ್ ಪ್ರತಿಷ್ಠಾನ ಮತ್ತು ಶ್ರೀದೇವಿ ಚಾರಿಟಬಲ್ ಟ್ರಸ್ಟಿನ ಪದಾಧಿಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

### ಲ್ಯಾಪ್ರೋಸ್ಕೋಪಿಕ್ ಚಿಕಿತ್ಸೆ ಮತ್ತು ಅದರ ಅನುಕೂಲಗಳು:

ಶಸ್ತ್ರಚಿಕಿತ್ಸೆಯನ್ನು ಮಾಡುವಾಗ ದೇಹವನ್ನು ತೆರೆದು, ಒಳಭಾಗಗಳ ಶಸ್ತ್ರಚಿಕಿತ್ಸೆಯನ್ನು ಮಾಡುವ ಬದಲಿಗೆ ದೇಹದ ಮೇಲೆ ಒಂದು ಸಣ್ಣ ರಂಧ್ರವನ್ನು ಕೊರೆದು, ಅದರ ಮೂಲಕ ಕ್ಯಾಮರಾವನ್ನು ಒಳಗೊಂಡಿರುವ ಒಂದು ಸೂಕ್ಷ್ಮ ಸಲಕರಣೆಯನ್ನು ತೂರಿಸಿ, ಅದರಲ್ಲಿರುವ ಫೈಬರ್ ಆಪ್ಟಿಕ್ ಬೆಳಕಿನ ಸಹಾಯದಿಂದ ನಿರ್ದಿಷ್ಟ ಭಾಗದ ಚಿತ್ರವನ್ನು ತೆಗೆದುಕೊಂಡು ಅದನ್ನು ವಿಶ್ಲೇಷಿಸಿ, ಅನಂತರ ಅಗತ್ಯವಾದ ಶಸ್ತ್ರಚಿಕಿತ್ಸೆಯನ್ನು ಅದೇ ಸಲಕರಣೆಯ ಮೂಲಕ ನೆರವೇರಿಸುವುದು. ಲ್ಯಾಪರ ಎಂಬುದು ಗ್ರೀಕ್ ಪದ; ಅದರ ಅರ್ಥ ಪಕ್ಕೆ ಅಥವಾ ಮೃದುವಾದ ಅಂಗ. ಈ ರೀತಿಯ ಶಸ್ತ್ರಚಿಕಿತ್ಸೆಯಲ್ಲಿ ಕನಿಷ್ಠ ಪ್ರಮಾಣದ ಒಂದು ರಂಧ್ರವನ್ನು ಮಾಡುವುದರಿಂದ ಹೆಚ್ಚಿನ ರಕ್ತಸ್ರಾವವಾಗಲೀ ಅಥವಾ ಸೋಂಕು ತಗಲುವ ಭಯವಾಗಲೀ ಇರುವುದಿಲ್ಲ. ಇದರಿಂದ ದೊರಕುವ ಚಿತ್ರಗಳು ಬಹಳ ಸ್ಪಷ್ಟವಾಗಿದ್ದು, ದೇಹದ ಒಳಭಾಗದಲ್ಲಿ ನಿರ್ದಿಷ್ಟ ಬಿಂದುವಿನ ಚಿಕಿತ್ಸೆಯನ್ನು ಮಾಡಬಹುದು. ಈ ಪ್ರಕ್ರಿಯೆಯಲ್ಲಿ ಆ ಬಿಂದುವಿನ ಅಕ್ಕಪಕ್ಕದಲ್ಲಿರುವ ಯಾವುದೇ ಅಂಗಕ್ಕೂ ಹಾನಿಯಾಗುವುದಿಲ್ಲ. ಅಲ್ಲದೆ, ಸಾಮಾನ್ಯ ಶಸ್ತ್ರಚಿಕಿತ್ಸೆಯಂತೆ ಅಲ್ಲದೆ, ಕೇವಲ ಒಂದು ಸಣ್ಣ ರಂಧ್ರದ ಮೂಲಕ ಈ ಪ್ರಕ್ರಿಯೆಯನ್ನು ನಡೆಸುವುದರಿಂದ, ರೋಗಿಗೆ ಆಗುವ ನೋವಿನ ಪ್ರಮಾಣವನ್ನು ಬಹಳ ಕಡಮೆಮಾಡಬಹುದು ಹಾಗೂ ಆ ರೋಗಿಯು ಆಸ್ಪತ್ರೆಯಿಂದ ಕಡಮೆ ಕಾಲಾವಧಿಯಲ್ಲಿ ಮನೆಗೆ ಹಿಂದಿರುಗಬಹುದು.

ಈ ಪ್ರಕ್ರಿಯೆಯನ್ನು ಹೊಟ್ಟೆ/ಕಿಬ್ಬೊಟ್ಟೆ, ಪಿತ್ತಕೋಶ, ಅಪೆಂಡೆಕ್ಟಮಿ, ಮೊದಲಾದ ಎಡೆಗಳಲ್ಲಿರುವ ಗೆಡ್ಡೆಗಳನ್ನು ತೆಗೆಯಲು ಬಳಸುತ್ತಾರೆ. ಈ ಪ್ರಕ್ರಿಯೆಯು ಮೂವತ್ತು ನಿಮಿಷದಿಂದ ಮೂರು ಗಂಟೆಯ ಸಮಯವನ್ನಷ್ಟೆ ತೆಗೆದುಕೊಳ್ಳುತ್ತದೆ. ಶಸ್ತ್ರಚಿಕಿತ್ಸೆಯ ಅನಂತರ ಒಳತೂರಿಸಿದ್ದ ಸಲಕರಣೆಯನ್ನು ಹೊರತೆಗೆದು, ರಂಧ್ರವನ್ನು ಮಾಡಿದ್ದ ಜಾಗಕ್ಕೆ ಹೊಲಿಗೆಯನ್ನು ಹಾಕುತ್ತಾರೆ ಅಥವಾ ವಿಶೇಷವಾದ ಅಂಟಿನಿಂದ ಆ ಸ್ಥಳವನ್ನು ಮುಚ್ಚಿಬಿಡುತ್ತಾರೆ. ಇಷ್ಟೆಲ್ಲಾ ಅನುಕೂಲಗಳಿರುವ ಈ ಪ್ರಕ್ರಿಯೆಯು ಸರಳವಾಗಿದ್ದು ಅನಪಾಯಕರವೂ ಆಗಿರುತ್ತದೆ.

ಈ ಪ್ರಕ್ರಿಯೆಯನ್ನು ಹೆರಿಗೆಗೆ ಸಂಬಂಧಿಸಿದ ಹಲವಾರು ಸಮಸ್ಯೆಗಳನ್ನು ನಿವಾರಿಸಲೂ ಹಾಗೂ ಅತ್ಯವಾದರೆ ಗರ್ಭಕೋಶವನ್ನು ತೆಗೆದುಹಾಕಲೂ, ಕರುಳಿನ ಕ್ಯಾನ್ಸರಿನ ಚಿಕಿತ್ಸೆಯಲ್ಲೂ ಬಳಸುತ್ತಾರೆ.




## ರೋಬೋಟಿಕ್ ಶಸ್ತ್ರಚಿಕಿತ್ಸೆ

**ಈ ಚಿಕಿತ್ಸೆಯಲ್ಲಿ ಶಸ್ತ್ರಚಿಕಿತ್ಸಕರು ರೋಬೋಟಿಕ್ ಕೈಗಳನ್ನು ಬಳಸಿ, ಬಹಳ ಕರಾರುವಾಕ್ಕಾಗಿ ಶಸ್ತ್ರಚಿಕಿತ್ಸೆಯನ್ನು ಮಾಡುತ್ತಾರೆ. ಇದು ಅತ್ಯಂತ ಆಧುನಿಕವಾದ ವಿಧಾನ. ಇದನ್ನು ಕೂಡ ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸೆಯಂತೆಯೇ ಸುಲಭವಾಗಿ, ಬಳಸಬಹುದು. ಆದರೆ ಇದನ್ನು ಬಳಸಲು ಉತ್ತಮವಾದ ಕೌಶಲದ ಅಗತ್ಯವಿರುತ್ತದೆ. ಇದರ ಸಾಫಲ್ಯ ಶಸ್ತ್ರಚಿಕಿತ್ಸಕನ ಜಾಣ್ಮೆ, ಕೌಶಲ ಮತ್ತು ಚುರುಕುತನಗಳನ್ನು ಅವಲಂಬಿಸಿರುತ್ತದೆ. ಈ ಎರಡೂ ವಿಧಾನಗಳಲ್ಲಿ ಡಾ. ಪಳನಿವೇಲು ಅವರು ಪರಿಣತಿಯನ್ನು ಸಾಧಿಸಿರುವ ಶಸ್ತ್ರಚಿಕಿತ್ಸಕರಾಗಿ ವಿಶ್ವಪ್ರಸಿದ್ಧರಾಗಿದ್ದಾರೆ.**

# ಜೈನಧರ್ಮದ ಆದಿಮೂರ್ತಿ ಆದಿನಾಥಸ್ವಾಮಿ



■ ಡಾ. ಕೆ. ಅನಂತರಾಮು
ಮೈಸೂರು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜಿನ ನಿವೃತ್ತ ಕನ್ನಡ ಪ್ರಾಧ್ಯಾಪಕರು


### ತೀರ್ಥಂಕರ ಪರಂಪರೆ

ಜೈನಧರ್ಮ ಭಾರತದ ಪ್ರಾಚೀನ ಧರ್ಮಗಳಲ್ಲಿ ಒಂದೆಂದೂ ಅದರ ಅನುಯಾಯಿಗಳು ನಂಬಿದ್ದಾರೆ. ಇವರಲ್ಲಿ 24 ತೀರ್ಥಂಕರರ ಕಥೆ ಬರುತ್ತದೆ. ಮೊದಲ 22 ತೀರ್ಥಂಕರರು ಪೌರಾಣಿಕ ವ್ಯಕ್ತಿಗಳು. 23ನೆಯ ತೀರ್ಥಂಕರ ಪಾರ್ಶ್ವನಾಥ. ಈತ ಐತಿಹಾಸಿಕ ವ್ಯಕ್ತಿ ಎಂದು ಹೇಳಲಾಗಿದೆ. ಇವನು ಜೈನಧರ್ಮದ ಸ್ಥಾಪಕನೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. 24ನೆಯ ತೀರ್ಥಂಕರನಾದ ಮಹಾವೀರನಗಿಂತ 250 ವರ್ಷಗಳ ಮೊದಲು ಪಾರ್ಶ್ವನಾಥ ಎಂಬ ತೀರ್ಥಂಕರರಿದ್ದರೆಂದು ಹೇಳಲಾಗಿದೆ.

ಮಹಾವೀರ 24ನೆಯ ತೀರ್ಥಂಕರ. ಮಹಾವೀರ ವೈಶಾಲಿಯ ಉಪನಾಗರವಾದ ಕುಂಡಲವನದಲ್ಲಿದ್ದ ಜ್ಞಾತ್ರಿಕ ಕ್ಷತ್ರಿಯ ಪಂಗಡದ ಸಿದ್ಧಾರ್ಥ ಹಾಗೂ ತ್ರಿಶಾಲಿ ದಂಪತಿಗಳಿಗೆ ಜನಿಸುತ್ತಾನೆ. ಇವನ ಮೊದಲ ಹೆಸರು ವರ್ಧಮಾನ. ಕ್ರಿ.ಪೂ. 540ರಲ್ಲಿ ಇವನ ಜನನವಾಗುತ್ತದೆ. ಇವನ ವಿದ್ಯಾಭ್ಯಾಸದ ಅನಂತರ ಯಶೋಧ ಎಂಬ ರಾಜಕುಮಾರಿಯೊಡನೆ ಮದುವೆಯಾಗುತ್ತದೆ. ಈ ದಂಪತಿಗಳಿಗೆ ಓರ್ವ ಮಗಳಿರುತ್ತಾಳೆ. ವರ್ಧಮಾನನ ತಂದೆ ತಾಯಿಗಳು ದಿಢೀರನೆ ಮರಣ ಹೊಂದಿದ ಅನಂತರ ಇವನಿಗೆ ವೈರಾಗ್ಯ ಉದ್ಭವವಾಗುತ್ತದೆ, ಸಂಪತ್ತು, ರಾಜ್ಯ, ಬಂಧುಬಳಗ, ಕೊನೆಗೆ ಬಟ್ಟೆಯನ್ನು ತ್ಯಾಗ ಮಾಡಿ ಜೃಂಭಿಕ ಗ್ರಾಮದ ಪಾಶ್ವನಾಥಬೆಟ್ಟದ ಬಳಿ ಇದ್ದ ಸಾಲುವೃಕ್ಷದ ಬಳಿ 13ವರ್ಷಗಳ ಕಾಲ ತಪಸ್ಸು ಮಾಡಿದಾಗ, ಇವನಿಗೆ ಪರಮಜ್ಞಾನ ಲಭ್ಯವಾಗುತ್ತದೆ. ಆಗ ಅವನಿಗೆ 'ಮಹಾವೀರ' ಎನ್ನುವ ಬಿರುದು ದೊರೆಯುತ್ತದೆ. ಮಹಾವೀರನಿಗೆ ಪರಮಜ್ಞಾನ ದೊರೆತಾಗ 42 ವರ್ಷ. 72ನೇ ವಯಸ್ಸಿನ ತನಕ ಈತ ತನ್ನ ದಿವ್ಯಜ್ಞಾನವನ್ನು ಜನರಿಗೆ ಉಪದೇಶಗಳ ಮೂಲಕ ಹಂಚಿ ಕ್ರಿ.ಪೂ. 468ರಲ್ಲಿ ರಾಜಗೃಹದ ಬಳಿ ಇರುವ ಪಾವಾ ಗ್ರಾಮದ ಬಳಿ ನಿರ್ವಾಣ ಹೊಂದುತ್ತಾನೆ. ಅವನ ಮುಖ್ಯ ಶಿಷ್ಯರಾದ ಸುಧರ್ಮನ್ ಜೈನಧರ್ಮದ ಮುಖ್ಯಸ್ಥನಾಗಿ ತನ್ನ ಗುರುಗಳ ಪ್ರಚಾರ ಕಾರ್ಯವನ್ನು ಮುಂದುವರಿಸುತ್ತಾನೆ.

ಮಹಾವೀರ ಬೋಧಿಸಿದ ಜೈನಧರ್ಮದಲ್ಲಿ ಕರ್ಮ, ಜೀವ ಮತ್ತು ಮೋಕ್ಷಕ್ಕೆ ಹೆಚ್ಚಿನ ಪ್ರಾಶಸ್ತವನ್ನು ಕೊಡಲಾಗಿದೆ. ಜೈನಧರ್ಮದ ಪ್ರಕಾರ ಆತ್ಮ ಪರಿಶುದ್ಧವಾಗಿರುತ್ತದೆ. ನಿಷ್ಕಲ್ಮಶವಾದ ಆತ್ಮವನ್ನು ಅಶುದ್ಧಗೊಳಿಸುವುದರಿಂದ ಸಂಸಾರ ಬಂಧನಕ್ಕೆ ಅದು ಸಿಲುಕುತ್ತದೆ. ಈ ಬಂಧನದಿಂದ ಜೀವವು ಕಷ್ಟವನ್ನು ಅನುಭವಿಸುತ್ತದೆ. ಪುದ್ಗಲ ಅಥವಾ ಆಸೆ ಎನ್ನುವುದರಿಂದ ಆತ್ಮವನ್ನು ದೂರವಿರಿಸಬೇಕಾದರೆ ಕಠಿಣವ್ರತ ಹಾಗೂ ತಪಸ್ಸುಗಳನ್ನು ಆಚರಿಸುವುದು ಮುಖ್ಯ. ಸಂಯುಕ್ತ ದರ್ಶನ, ಸಂಯುಕ್ತ ಜ್ಞಾನ ಮತ್ತು ಸಂಯುಕ್ತ ಚಾರಿತ್ರ್ಯ ಎಂಬ ತ್ರಿರತ್ನಗಳ ಅನುಷ್ಠಾನದಿಂದ ಆತ್ಮವನ್ನು ಪರಿಶುದ್ಧವಾಗಿಸಬಹುದು. ವ್ಯಕ್ತಿ ಅನುಸರಿಸಬೇಕಾದ ಅಹಿಂಸೆ ಮತ್ತು ನೈತಿಕ ಅಂಶಗಳಿಗೆ ಜೈನಧರ್ಮ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದೆ.

ಜೈನಧರ್ಮದ ಪರಂಪರೆಯನ್ನು ತಿಳಿಯಬೇಕಾದರೆ ಜೈನಪುರಾಣಗಳನ್ನು ಅಧ್ಯಯನ ಮಾಡಬೇಕು. ಎಲ್ಲಾ ಪುರಾಣಗಳಲ್ಲಿ



ಕಾಣಬರುವಂತೆ ಜೈನಪುರಾಣದಲ್ಲೂ ಪವಾಡಸದೃಶಘಟನೆಗಳು ಹೇರಳವಾಗಿರುತ್ತದೆ. ಅವುಗಳ ಮಧ್ಯೆ ನಾವು ಐತಿಹಾಸಿಕ ಅಂಶಗಳನ್ನು ಹುಡುಕಿ ತೆಗೆಯಬೇಕಾಗಿದೆ. ಮೊದಲ ತೀರ್ಥಂಕರ ಆದಿನಾಥನ ಚರಿತ್ರೆಯಲ್ಲಿ ಅನೇಕ ಐತಿಹಾಸಿಕ ಅಂಶಗಳ ಜೊತೆಗೆ ಪೌರಾಣಿಕ ಸಂಗತಿಗಳು ಸೇರಿಕೊಂಡಿದೆ. ಆದಿನಾಥನ ಚರಿತ್ರೆಯು ಭಾರತದ ಇತಿಹಾಸ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಅಮೋಘವಾದ ಕಾಣಿಕೆಯನ್ನು ಕೊಟ್ಟಿದೆ. ಮೊದಲ ತೀರ್ಥಂಕರನಾದ ಆದಿನಾಥನ ಚರಿತ್ರೆಯನ್ನು ಈಗ ತಿಳಿಯೋಣ.

ಜೈನಪರಂಪರೆಯಲ್ಲಿ ಆದಿನಾಥನು ಮೊತ್ತಮೊದಲಿಗನಾಗಿದ್ದಾನೆ. ಅವನಿಗೆ ವೃಷಭನಾಥ, ಪುರದೇವ ಎಂಬ ಹೆಸರುಗಳೂ ಇವೆ. ಆದಿನಾಥನು ಈ ಮೊದಲು ಹತ್ತು ಜನ್ಮಗಳನ್ನೆತ್ತಿ ಕರ್ಮಕ್ಷಯ ಮಾಡಿಕೊಂಡಿದ್ದನು.

### ಗರ್ಭಾವತರಣ ಕಲ್ಯಾಣ

ಆದಿನಾಥನು ತೀರ್ಥಂಕರನಾಗಲು ಅವತರಿಸಿದ ಜನ್ಮದಲ್ಲಿ ಅವನು ಅಯೋಧ್ಯೆಯ ರಾಜರಾಣಿಯರಾದ ನಾಭಿರಾಜ ಮತ್ತು ಮರುದೇವಿ ಅವರ ಸುಪುತ್ರನಾಗಿ ಜನಿಸಿದನು. ಈ ಹಿಂದಿನ ಜನ್ಮದಲ್ಲಿ ಸರ್ವಾರ್ಥಸಿದ್ಧಿ ಎಂಬ ದಿವ್ಯಲೋಕದಲ್ಲಿದ್ದವನು, ಅಲ್ಲಿನ ಆಯಸ್ಸು ತೀರಿದ ಬಳಿಕ, ಅಯೋಧ್ಯೆಗೆ ಇಳಿದು ಬಂದು ಮರುದೇವಿಯ ಗರ್ಭವನ್ನು ಪ್ರವೇಶಿಸಿದನು. ಜೈನಪುರಾಣಗಳ ಕಥಾನುಸಾರವಾಗಿ, ಆ ವಿಷಯವನ್ನು ಅರಿತ, ಸ್ವರ್ಗದ ಇಂದ್ರಾದಿ ದೇವತೆಗಳು ಅಯೋಧ್ಯೆಗೆ ಬಂದು, ತೀರ್ಥಂಕರನಿಗೆ ಜನ್ಮನೀಡುವ ಆ ಪುಣ್ಯ ದಂಪತಿಗಳನ್ನು ಪೂಜಿಸಿ 'ಗರ್ಭಾವತರಣ ಕಲ್ಯಾಣ' ಎಂಬ ಪ್ರಥಮ ಸಂಭ್ರಮವನ್ನು ಆಚರಿಸಿ ತೆರಳಿದರು. ಅದು ಆಷಾಡಮಾಸದ ಶುಕ್ಲಪಕ್ಷದ ಬಿದಿಗೆಯಾಗಿತ್ತು.

### ಜನ್ಮಾಭಿಷೇಕ ಕಲ್ಯಾಣ

ನವಮಾಸವು ತುಂಬಿದ ಬಳಿಕ, ಚೈತ್ರಮಾಸದ ಶುಕ್ಲಪಕ್ಷದ ನವಮಿಯಂದು ಮರುದೇವಿಯು ತೀರ್ಥಂಕರ ಶಿಶುವಿಗೆ ಜನ್ಮ ನೀಡಿದಳು. ಮಗುವನ್ನು ಇಂದ್ರಾದಿದೇವತೆಗಳು ಈ ಹಿಂದಿನಂತೆಯೇ ಅಯೋಧ್ಯೆಗೆ ಇಳಿದುಬಂದು, ಮಂದರಪರ್ವತಕ್ಕೆ ಒಯ್ದು, ಕ್ಷೀರಸಮುದ್ರದ ಜಲದಿಂದ ಸ್ನಾನಮಾಡಿಸಿ, 'ಜನ್ಮಾಭಿಷೇಕಕಲ್ಯಾಣ' ಎಂಬ ಎರಡನೆಯ ಸಂಭ್ರಮವನ್ನು ನೆರವೇರಿಸಿ, ಶಿಶುವಿಗೆ ವೃಷಭನಾಥ ಎಂದು ನಾಮಕರಣ ಮಾಡಿ, ಶಿಶುಸಹಿತರಾಗಿ ಅಯೋಧ್ಯೆಗೆ ಬಂದು, ಶಿಶುವನ್ನು ತಂದೆ ತಾಯಿಗಳಿಗೆ ಒಪ್ಪಿಸಿ, ಆನಂದನರ್ತನ ಮಾಡಿ ತೆರಳಿದರು.

### ಮಹಿಳಾಸಬಲೀಕರಣದ ಮೊದಲ ಪುರುಷ

ಆದಿನಾಥನು ಯೌವ್ವನಕ್ಕೆ ಕಾಲಿಡುತ್ತಾ ಸಮಸ್ತ ವಿದ್ಯೆಗಳಲ್ಲಿ ಪಾರಂಗತನಾದನು. ತಂದೆತಾಯಿಗಳ ಒತ್ತಾಯಕ್ಕೆ ಮಣಿದು ಯಶಸ್ವಿನಿ ಮತ್ತು ಸುನಂದಾ ಎಂಬಿಬ್ಬರು ಕನ್ಯಾರತ್ನಗಳನ್ನು ಒಂದೇ ಹಸೆಯಲ್ಲಿ ಕೈ ಹಿಡಿದನು. ಮನುಕುಲಕ್ಕೆ ಮಾದರಿಯಾದ ದಾಂಪತ್ಯ ಅವನದಾಯಿತು. ಯಶಸ್ವಿನಿಯು ಭರತ ಮೊದಲಾದ 100 ಮಂದಿ ಪುತ್ರರನ್ನು, ಬ್ರಾಹ್ಮೀ ಎಂಬ ಪುತ್ರಿಯನ್ನು, ಮತ್ತೊಬ್ಬ ಮಡದಿ ಸುನಂದೆಯು ಬಾಹುಬಲಿ ಎಂಬ ಕುಮಾರನನ್ನು, ಸುಂದರಿ ಎಂಬ ಕುಮಾರಿಯನ್ನು ಪಡೆದರು.

ಆದಿನಾಥನು ಮಕ್ಕಳು ಮೇಲೆ ಬರುತ್ತಿದ್ದಂತೆ, ತಾನು ಅರಿತಿದ್ದ ವಿದ್ಯೆಗಳನ್ನೆಲ್ಲಾ ತನ್ನ ಮಕ್ಕಳ ಮೂಲಕ ಲೋಕಕ್ಕೆ ಧಾರೆಯೆರೆದನು. ಭಕ್ತಿಯ ಬೊಂಬೆಗಳೋ ಎಂಬಂತಿದ್ದ ಬ್ರಾಹ್ಮೀ ಮತ್ತು ಸುಂದರಿಯರನ್ನು ತೊಡೆಯ ಮೇಲೆ ಕೂರಿಸಿಕೊಂಡು ಪ್ರೇಮದಿಂದ ಬ್ರಾಹ್ಮಿಗೆ ಲಿಪಿಶಾಸ್ತ್ರವನ್ನು ಬೋಧಿಸಿದನು. ಈಗ ಭಾರತದ ಹಲವು ಲಿಪಿಗಳಿಗೆ ಮೂಲವಾದ ಲಿಪಿಯೊಂದು ಬ್ರಾಹ್ಮೀಲಿಪಿ ಎಂದೇ ಖ್ಯಾತವಾಗಿದೆ. ಸುನಂದೆಗೆ ಅಂಕಗಣಿತ, ವ್ಯಾಕರಣ, ಛಂದಸ್ಸು ಕಾವ್ಯಶಾಸ್ತ್ರಗಳನ್ನು ಉಪದೇಶಿಸಿದನು. ತರುವಾಯ ಭರತ, ಬಾಹುಬಲಿ ಮುಂತಾದ ಪುತ್ರ ಸಮುದಾಯಕ್ಕೆ ಲೋಕೋಪಯೋಗಿಯಾದ ವಿವಿಧ ವಿದ್ಯೆಗಳನ್ನು ಕಲಿಸಿಕೊಟ್ಟನು.

### ಆದಿನಾಥನಿಂದ ಭೋಗಭೂಮಿಯು ಕರ್ಮಭೂಮಿಯಾದ ಪರಿ

ಆದಿನಾಥನ ಕಾಲದವರೆಗೆ ಈ ಭೂಮಂಡಲವು ಕೇವಲ ಭೋಗಭೂಮಿಯಾಗಿತ್ತು. ಜನರು ಕಲ್ಪವೃಕ್ಷಗಳಿಂದ ಬೇಕುಬೇಕಾದುದನ್ನು ಬೇಡಿ ಪಡೆದು ಸುಖವಾಗಿ ಜೀವಿಸುತ್ತಿದ್ದರು. ಆದರೆ ಆದಿನಾಥನ ಕಾಲಕ್ಕೆ ಅವೆಲ್ಲವೂ ಶಕ್ತಿಗುಂದಿದುವು. ಆಗ ಆದಿನಾಥನು ಎತ್ತುಗಳನ್ನು ಹೂಡಿ, ಭೂಮಿಯನ್ನು ಉತ್ತು, ಬಿತ್ತನೆ ಮಾಡಿ, ವಿವಿಧ ಬೆಳೆಗಳನ್ನು ಬೆಳೆಯುವ ಕೃಷಿವಿದ್ಯೆಯನ್ನು ಲೋಕದ ಜನರಿಗೆ ತಿಳಿಸಿಕೊಟ್ಟನು. ಹೀಗೆ ಈತ ಜಗತ್ತಿನ ಪ್ರಥಮ ಕೃಷಿಕನಾದನು.

### ಪರಿನಿಷ್ಕ್ರಮಣ ಕಲ್ಯಾಣ

ತಂದೆಯಾದ ನಾಭಿರಾಜನ ತರುವಾಯ ಆದಿನಾಥನೇ ಅಯೋಧ್ಯೆ ಮಹಾರಾಜನಾದನು. ಅವನು ಚೆನ್ನಾಗಿ ರಾಜ್ಯಭಾರ ನಡೆಸುತ್ತಿರುವಾಗ, ಒಮ್ಮೆ ದೇವೇಂದ್ರನು ಸ್ವರ್ಗದಿಂದ ಆದಿನಾಥನ ರಾಜ್ಯಸಭೆಗೆ ಬಂದು, ಆ ಸ್ವಾಮಿಯ ಸಂತೋಷಾರ್ಥವಾಗಿ ತನ್ನ ಲೋಕದ ನೀಳಾಂಜನೆಯೆಂಬ ಅಪ್ಸರೆಯ ನೃತ್ಯವನ್ನು ಏರ್ಪಡಿಸಿದನು. ನೃತ್ಯವೊಂದು ಅವಳಿಂದ ಸಂಪನ್ನಗೊಳ್ಳುತ್ತಿರುವಾಗಲೇ ನೀಳಾಂಜನೆಯ ಆಯುಷ್ಯವು ತೀರಿಹೋಗಿ, ದೇವತೆಗಳ ಕಟ್ಟಳೆಯಂತೆ, ಅವಳು ರಂಗದಿಂದ ಮಾಯವಾಗಿಬಿಟ್ಟಳು. ಆಗ ದೇವೇಂದ್ರನು ರಸಭಂಗವಾಗಬಾರದೆಂದು. ತನ್ನ ದಿವ್ಯಶಕ್ತಿಯಿಂದ ನೀಳಾಂಜನೆಯನ್ನೇ ಸರ್ವವಿಧದಲ್ಲಿಯೂ ಹೋಲುವ ಅಪ್ಸರೆಯೊಬ್ಬಳನ್ನು ಸೃಷ್ಟಿಸಿ, ನೃತ್ಯವು ಕೊಂಚವೂ ಎಡೆಬಿಡದಂತೆ ಮುಂದುವರಿಯುವಂತೆ ಮಾಡಿದ. ಆ ಚಮತ್ಕಾರವು ಸಭೆಯಲ್ಲಿದ್ದ ಯಾರಿಗೂ ತಿಳಿಯಲಿಲ್ಲ. ಭವ್ಯಜೀವಿಯಾದ ಆದಿನಾಥನಿಗೆ ಮಾತ್ರ ತಿಳಿದುಹೋಯಿತು. "ದೇವತೆಗಳ ಆಯುಷ್ಯವೇ ಹೀಗೆ ಕ್ಷಣಭಂಗುರವಾಗಿರುವಾಗ, ಮನುಷ್ಯರಾದ ನಮ್ಮ ಪಾಡೇನು" ಎಂಬ ಚಿಂತನೆ ಮನಸ್ಸಿಗೆ ಬಂದು ಅವನು ವೈರಾಗ್ಯವನ್ನು ತಾಳಿದನು. ಒಡನೆಯೇ ಭರತನಿಗೆ ಅಯೋಧ್ಯೆಯ ಪಟ್ಟವನ್ನು ಕಟ್ಟಿ ತಾನು ತಪಸ್ಸಿಗೆಂದು ಅರಣ್ಯಕ್ಕೆ ತೆರಳಿದನು. ವಿಷಯ ತಿಳಿದ ಇಂದ್ರಾದಿ ದೇವತೆಗಳು ತಿಳಿದು ಬಂದು, ಆದಿನಾಥನನ್ನು ಪೂಜಿಸಿ, 'ಪರಿನಿಷ್ಕಮಣ ಕಲ್ಯಾಣ' ಎಂಬ ಮೂರನೆಯ ಮಹೋತ್ಸವವನ್ನು ನೆರವೇರಿಸಿದರು. ಅದು ಚೈತ್ರಮಾಸದ ಕೃಷ್ಣಪಕ್ಷದ ನವಮಿಯಾಗಿತ್ತು.

### ಕೇವಲಜ್ಞಾನ ಕಲ್ಯಾಣ

ಆದಿನಾಥಸ್ವಾಮಿಯು ಅರಣ್ಯದಲ್ಲಿ ತನ್ನಿಂದತಾನೇ ದಿಗಂಬರದೀಕ್ಷೆಯನ್ನು ಸ್ವೀಕರಿಸಿ, ಘೋರವಾದ ತಪಸ್ಸನ್ನು ಆಚರಿಸಿ, ಒಂದಾನೊಂದು ಫಾಲ್ಗುಣ ಮಾಸದ ಕೃಷ್ಣಪಕ್ಷದ ಏಕಾದಶಿಯಂದು ಕೇವಲಜ್ಞಾನ (ದಿವ್ಯಜ್ಞಾನ)ದಿಂದ ಉದ್ದೀಪಿತನಾದನು. ಆಗ ಇಂದ್ರಾದಿದೇವತೆಗಳು ಆಗಮಿಸಿ ಆದಿನಾಥನನ್ನು ಪೂಜಿಸಿ, 'ಕೇವಲಜ್ಞಾನ ಕಲ್ಯಾಣ' ಎಂಬ ಸಂಭ್ರಮವನ್ನು ಸಂಪನ್ನಗೊಳಿಸಿದರು.

### ಸಮವಸರಣ ಮಂಟಪ

ತರುವಾಯ ಇಂದ್ರನ ಆಜ್ಞೆಯಂತೆ ಕುಬೇರನು 'ಸಮವಸರಣ ಮಂಟಪ' ಎಂಬ ಗಗನಗಾಮಿಯಾದ ಸ್ವಯಂಚಾಲಿತವಾದ ದಿವ್ಯಮಂಟಪವೊಂದನ್ನು ನಿರ್ಮಿಸಿದನು. ಆದಿನಾಥನು ಅದರಲ್ಲಿ ಕುಳಿತು, ಲೋಕವನ್ನೆಲ್ಲ ಸಂಚರಿಸಿ, ಜೈನಧರ್ಮದ ತತ್ತ್ವಗಳನ್ನು ದಿವ್ಯಧ್ವನಿಯ ಮೂಲಕ ಉಪದೇಶ ಮಾಡಿದನು.

### ಮೋಕ್ಷಕಲ್ಯಾಣ

ತನ್ನ ಜೀವಿತದ ಅಂತ್ಯಕಾಲಕ್ಕೆ ಆದಿನಾಥನು ಕೈಲಾಸಪರ್ವತಕ್ಕೆ ಬಂದು, ಸಮವಸರಣ ಮಂಟಪವನ್ನು ವಿಸರ್ಜಿಸಿ, ದೇಹತ್ಯಾಗ ಮಾಡಿಬಿಟ್ಟನು. ಅವನ ಶರೀರವು ಕರ್ಪೂರದಂತೆ ಭಸ್ಮವಾಗಿಬಿಟ್ಟಿತು. ಅಂದು ಮಾಘಮಾಸದ ಕೃಷ್ಣಪಕ್ಷದ ಚತುರ್ದಶಿಯಾಗಿತ್ತು. ದೇವತೆಗಳು ಬಂದು ಸ್ವಾಮಿಯನ್ನು ಕೊಂಡಾಡಿ, ಅವನ ಮೋಕ್ಷಕಲ್ಯಾಣ ಪೂಜೆಯನ್ನು ನೆರವೇರಿಸಿ ಆನಂದನರ್ತನ ಮಾಡಿದರು.

ಸಂಸ್ಕೃತಭಾಷೆಯಲ್ಲಿರುವ 'ಮಹಾಪುರಾಣ' ಎಂಬ ಗ್ರಂಥದಲ್ಲಿ ಆದಿನಾಥನೇ ಮೊದಲಾದ 24 ತೀರ್ಥಂಕರರ ಚರಿತ್ರೆಯು ವರ್ಣಿತವಾಗಿದೆ. ಅದನ್ನೇ ಅನುಸರಿಸಿ 10ನೇ ಶತಮಾನದಲ್ಲಿ ಕನ್ನಡದ ಆದಿಕವಿ ಪಂಪಮಹಾಕವಿಯು 'ಆದಿಪುರಾಣ' ಎಂಬ ಹೆಸರಿನಲ್ಲಿ 16 ಆಶ್ವಾಸಗಳ ಚಂಪೂ ಮಹಾಕಾವ್ಯವನ್ನು ರಚಿಸಿದ್ದಾನೆ.

**(ಮಾರ್ಚ್ 31ರಂದು ನಡೆಯುವ ಮಹಾವೀರ ಜಯಂತಿಯ ಸಂದರ್ಭದಲ್ಲಿನ ವಿಶೇಷ ಲೇಖನ)**

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**